ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 5 | ಫೆಬ್ರವರಿ 3, 1980 | 40 ಪೈಸೆ

ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧ

ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವಿನ ಸಂಬಂಧ ನಮ್ಮ ಸಂಯುಕ್ತ ಭಾರತದಲ್ಲಿ ಹೇಗಿರಬೇಕೆಂಬುದರ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸ್ಪಷ್ಟ ಅಭಿಪ್ರಾಯವನ್ನು ಮುಂದಿಟ್ಟಿದೆ. ಹಿಂದೆ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ರಾಜ್ಯಗಳ ಸ್ವಾಯತ್ತತೆಗೆ ಅದು ತಿಲಾಂಜಲಿ ಕೊಟ್ಟು ರಾಜ್ಯಗಳಲ್ಲಿದ್ದ ಕಾಂಗ್ರೆಸ್ಸೇತರ ಸರಕಾರಗಳನ್ನುರುಳಿಸುವುದರಲ್ಲಿ ಗಮನಹರಿಸಿ, ಎಲ್ಲ ತಂತ್ರ-ಕುತಂತ್ರಗಳನ್ನೂ ನಡೆಸಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಕಾಂಗ್ರೆಸ್ಸೇತರ ಸರಕಾರಗಳಿಗೆ ಎಲ್ಲ ರೀತಿಯ ತೊಂದರೆಗಳನ್ನು ಕೊಟ್ಟು, ಸಂಪನ್ಮೂಲಗಳ ಹಂಚಿಕೆಯಲ್ಲಿ, ಕೇಂದ್ರದಿಂದ ಹಣವೊದಗಿಸುವುದರಲ್ಲಿ ಮಲತಾಯಿ ಧೋರಣೆಯನ್ನನುಸರಿಸಿತ್ತು. ಆ ರಾಜ್ಯಗಳಿಗೆ ಅಧಿಕ ಹಣಕಾಸಿನ ಸಹಾಯ ಬೇಕಾದರೆ ಕಾಂಗ್ರೆಸ್ ಸರಕಾರವೇ ಇರುವುದಗತ್ಯವೆಂದೂ ಸಾರುತ್ತಿತ್ತು. ಈ ಪ್ರಯತ್ನಗಳು ಯಶಸ್ವಿಯಾಗದಿದ್ದಾಗ ಗಲಭೆಯೆಬ್ಬಿಸಿ ಆ ಸರಕಾರಗಳನ್ನು, (ಅವುಗಳಿಗೆ ಶಾಸನ ಸಭೆಯಲ್ಲಿ ಬಹುಮತವಿದ್ದರೂ ಸಹ) ವಿಸರ್ಜನೆ ಮಾಡುತ್ತಿತ್ತು. ರಾಜ್ಯಗಳ ಸ್ವಾಯತ್ತತೆಯ ತತ್ವವನ್ನು ಗಾಳಿಗೆ ತೂರಿ ತನ್ನ ಕೈಗೊಂಬೆ ಸರಕಾರಗಳನ್ನು ಸ್ಥಾಪಿಸುವುದರಲ್ಲಿ ಕುಖ್ಯಾತಿಯನ್ನು ಕಾಂಗ್ರೆಸ್ ಪಡೆದಿತ್ತು.

ಸಂಪಾದಕೀಯ

ಈಗ ಇಂದಿರಾರವರು ಪುನಃ ಅಧಿಕಾರಕ್ಕೆ ಬಂದ ಮೇಲೆ ಈ ಪ್ರಶ್ನೆ ತೀವ್ರವಾಗಿ ತಲೆಯೆತ್ತಿದೆ. ರಾಜ್ಯಗಳಲ್ಲಿ ಇತರ ಪಕ್ಷಗಳ ಸರಕಾರವಿರುವುದನ್ನು ಸಹಿಸುವ ತಾಳ್ಮೆ ಅವರಿಗಿಲ್ಲ. ರಾಜ್ಯಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂಬುದಾಗಿ ಔಪಚಾರಿಕವಾಗಿ ಸಾರಿದರೂ ರಾಜ್ಯಗಳಲ್ಲಿರುವ ಕಾಂಗ್ರೆಸ್ಸೇತರ ಮಂತ್ರಿಮಂಡಲಗಳನ್ನೇ ಕಾಂಗ್ರೆಸ್ಸಿಗೆ ಸೇರಿಸುವ ಪಿತೂರಿ ನಡೆಸಿದ್ದಾರೆ. ಹರಿಯಾಣದಲ್ಲಿ ಈಗಾಗಲೇ ಇದು ಯಶಸ್ವಿಯಾಗಿದೆ. ಒರಿಸ್ಸಾ, ಮಹಾರಾಷ್ಟ್ರ, ಹಿಮಾಚಲ್ ಪ್ರದೇಶ, ಬಿಹಾರ ಮತ್ತಿತರ ಕಡೆ ಇದಕ್ಕೆ ತೀವ್ರ ಪ್ರಯತ್ನ ನಡೆದಿದೆ. ಶಾಸನಸಭಾ ಸದಸ್ಯರನ್ನು ಕೊಂಡುಕೊಳ್ಳುವುದಕ್ಕೆ ಆದ್ಯಗಮನ ಕೊಡಲಾಗಿದೆ. ಇದು ವಿಫಲವಾದಲ್ಲಿ ಅಲ್ಲಿಯ ರಾಜ್ಯ ಸರಕಾರಗಳನ್ನು ವಜಾ ಮಾಡುವುದರಲ್ಲಿ ಯಾವ ಸಂಶಯವೂ ಇಲ್ಲ.

ಆದರೆ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಅವರ ಆಟವು ವಿಫಲಗೊಳ್ಳುವುದರಲ್ಲಿ ಯಾವ ಸಂಶಯವೂ ಇಲ್ಲ. ಕೇಂದ್ರ ಸರಕಾರದ ಮಂತ್ರಿಯಾದ ಶ್ರೀ ಅಬ್ದುಲ್‌ಗಣಿ ಚೌಧರಿಯವರು ಇತ್ತೀಚೆಗೆ ಕಲ್ಕತ್ತೆಗೆ ಹೋದಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಬಂಗಾಳದ ಕೊಲ್ಲಿಗೆ ಬೀಸಾಡುವ ಬೆದರಿಕೆ ಹಾಕಿದ್ದಾರೆಂಬ ವರದಿಯಾಗಿದೆ.

[ಕಡೆಯ ಪುಟ ನೋಡಿ]

ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಗೆಲುವು

ಹೊಸ ವರ್ಷದಲ್ಲಿ ಅಧಿಕಾರ ವಹಿಸಿಕೊಂಡ ಕಾಂಗ್ರೆಸ್ (ಐ) ರಾಜ್ಯಸಭೆಯಲ್ಲಿ ಪ್ರಥಮ ಪರಾಭವವನ್ನು ಅನುಭವಿಸಬೇಕಾಯಿತು. ತಾ. 30-1-1980 ರಂದು ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸಲ್ಲಿಸುವ ಬಗ್ಗೆ ನಡೆದ ಚರ್ಚೆಯಲ್ಲಿ ವಿರೋಧ ಪಕ್ಷಗಳು ಸೂಚಿಸಿದ ತಿದ್ದುಪಡಿ ಅಂಗೀಕೃತವಾಗುವುದರ ಮೂಲಕ ಇಂದಿರಾ ಗಾಂಧಿಯವರ ಸರಕಾರ ಮೊದಲ ಸೋಲಿನ ಅನುಭವ ಪಡೆಯಿತು. ತಿದ್ದುಪಡಿ ಪರ 80 ಮತಗಳು ಹಾಗೂ ವಿರುದ್ಧ 75 ಮತಗಳು ಬಂದವು. ಇಂದಿರಾ ಸರಕಾರಕ್ಕೆ ಇದೊಂದು ನೈತಿಕ ಪರಾಭವ.

ವಿರೋಧ ಪಕ್ಷಗಳ ಏಳು ಜನ ಸದಸ್ಯರ ಹೆಸರಿನಲ್ಲಿ ಸಲ್ಲಿಸಿದ ತಿದ್ದುಪಡಿಯಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿಲ್ಲದ ರಾಜ್ಯಗಳ ವಿಧಾನಸಭೆಗಳನ್ನು ಉರುಳಿಸಲು ಭಾರೀ ಪ್ರಮಾಣದಲ್ಲಿ ಪಕ್ಷಾಂತರ ನಡೆಯುವಂತೆ ಮಾಡುತ್ತಿರುವುದು ಹಾಗೂ ಸಂವಿಧಾನದ ಫೆಡರಲ್ ತತ್ವಗಳನ್ನು ಉಲ್ಲಂಘಿಸಿ ಅಂತಹ ವಿಧಾನಸಭೆಗಳನ್ನು ಏಕಪಕ್ಷೀಯವಾಗಿ ವಿಸರ್ಜಿಸುವ ಕಳವಳಕಾರಿ ಕ್ರಮಗಳನ್ನು ಕುರಿತು ರಾಷ್ಟ್ರಪತಿಯವರ ಭಾಷಣದಲ್ಲಿ ಯಾವ ಪ್ರಸ್ತಾಪವೂ ಇಲ್ಲದಿರುವುದನ್ನು ಪ್ರಸ್ತಾಪಿಸಲಾಗಿದೆ. ಅಲ್ಲದೆ ಪಕ್ಷಾಂತರವನ್ನು ನೇರವಾಗಿ ಅಥವಾ ಪರೋಕ್ಷವಾಗಿ ಸರಕಾರ ಪ್ರೋತ್ಸಾಹಿಸುವುದಿಲ್ಲವೆಂಬ ಭರವಸೆಯನ್ನೂ ನೀಡಿಲ್ಲದಿರುವುದು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂದು ತಿದ್ದುಪಡಿ ತಿಳಿಸಿದೆ.

ವಂದನಾ ನಿರ್ಣಯಕ್ಕೆ ತಿದ್ದುಪಡಿಯನ್ನು ಸಿ. ಪಿ. ಐ. ನ ಕಾಂ. ಭೂಪೇಶಗುಪ್ತ, ಸಿ. ಪಿ. ಐ. (ಎಂ) ನಾಯಕ ಕಾಂ. ಪಿ. ರಾಮಮೂರ್ತಿ, ಜನತಾಪಕ್ಷದ ಶ್ರೀ ಎಲ್.ಕೆ. ಅದ್ವಾನಿ, ಕಾಂಗ್ರೆಸ್ (ಯು)ನ ಶ್ರೀ ಪಿ. ಜಿ. ಕುಲಕರ್ಣಿ, ಲೋಕದಳದ ಶ್ರೀ ರಬಿ ರಾಯ್ ಹಾಗೂ ಅಣ್ಣಾ ಡಿ. ಎಂ. ಕೆ. ಪಕ್ಷದ ಸತ್ಯವಾಣಿ ಮುತ್ತುರವರು

[ಕಡೆಯ ಪುಟನೋಡಿ]

ಪಕ್ಷಾಂತರ ಪ್ರಭುತ್ವ

1967ರಿಂದೀಚೆಗೆ ಪಕ್ಷಾಂತರ ರಾಜಕೀಯ ದೇಶಕ್ಕೆ ಒಂದು ಪಿಡುಗಾಗಿ ಪರಿಣಮಿಸಿದೆ. ಯಾವ ತತ್ವ, ಆದರ್ಶ, ಸ್ಪಷ್ಟವಾದ ಕಾರ್ಯಕ್ರಮವಿಲ್ಲದಿರುವ ಬೂರ್ಜ್ವಾ-ಜಮೀನುದಾರ ಪಕ್ಷಗಳ ಸಂಸತ್ ಸದಸ್ಯರು, ವಿಧಾನಸಭಾ ಸದಸ್ಯರು, ಪಕ್ಷದ ಮುಖಂಡರು ಕೇವಲ ಅಧಿಕಾರ ರಾಜಕೀಯಕ್ಕೆ ಅಂಟಿಕೊಂಡು ಹೋಗಲು ಪಕ್ಷಾಂತರ ಸಹಾಯಕಾರಿಯಾಗಿದೆ. 1967ರಲ್ಲಿ ಕೇವಲ ಒಂದು ವರ್ಷದ ಅವಧಿಯಲ್ಲಿ 438 ಪಕ್ಷಾಂತರಗಳಾದವು ಎಂದು ಒಂದು ಅಂದಾಜು.

ಪಕ್ಷಾಂತರದ ಮೊದಲ ಹೆಜ್ಜೆಯಾಗಿ "ಮನಸ್ಸಾಕ್ಷಿ"ಯಾಗಿ ನಡೆದುಕೊಳ್ಳುವ ಕಾರ್ಯವಿಧಾನವನ್ನು ಶ್ರೀಮತಿ ಇಂದಿರಾಗಾಂಧಿಯವರು ಶ್ರೀ ನೀಲಂ ಸಂಜೀವರೆಡ್ಡಿ ಮತ್ತು ಶ್ರೀ ವಿ.ವಿ. ಗಿರಿಯವರ ನಡುವಣ ರಾಷ್ಟ್ರಾಧ್ಯಕ್ಷ ಪದವಿಗಾಗಿ ನಡೆದ ಚುನಾವಣೆಯಲ್ಲಿ ಆಚರಣೆಗೆ ತಂದರು. ಇದನ್ನು ಅನುಸರಿಸಿ "ಮನಸ್ಸಾಕ್ಷಿ"ಯ ನೆಪದಲ್ಲಿ ದೇಶಾದ್ಯಂತ ದೊಡ್ಡ ರೀತಿಯಲ್ಲಿ ಪಕ್ಷಾಂತರಗಳು ನಡೆದವು. ಅನೇಕ ರಾಜ್ಯ ಸರಕಾರಗಳು ಉರುಳಿಹೋದವು.

ಜನತಾಪಕ್ಷ ಅಧಿಕಾರಕ್ಕೆ ಬಂದ ಹೊಸದರಲ್ಲಿ ಪಕ್ಷಾಂತರವನ್ನು ವಿರೋಧಿಸುವ ಮಸೂದೆಯೊಂದನ್ನು ಸಂಸತ್ತಿನಲ್ಲಿ ಮಂಡಿಸುವ ಸೂಚನೆಯಿತ್ತು. ಆದರೆ, 1977ರಲ್ಲಿ ಕಾಂಗ್ರೆಸ್‌ನಿಂದ ಅನೇಕ ಜನರು ಜನತಾಪಕ್ಷಕ್ಕೆ ಸೇರುವ ಆಸೆಯನ್ನು ವ್ಯಕ್ತಪಡಿಸಿದ್ದರಿಂದ ಪಕ್ಷಾಂತರ ನಿಷೇಧ ಕಾನೂನು ಹಾಗೆಯೇ ಉಳಿಯಿತು ದೇಶಾದ್ಯಂತ ಅನೇಕ ಸಂಸತ್ ಸದಸ್ಯರು ಹಾಗೂ ವಿಧಾನಸಭಾ ಸದಸ್ಯರು ಜನತಾಪಕ್ಷ ಸೇರಿದರು. ಹೀಗೆ ಸೇರಿದವರಲ್ಲಿ ಕರ್ನಾಟಕದ ಸಂಸತ್ ಸದಸ್ಯರಾಗಿದ್ದ ಶ್ರೀಮತಿ ಸರೋಜಿನಿ ಮಹಿಷಿ, ಶ್ರೀ ಕೊಂಡಜ್ಜಿ ಬಸಪ್ಪ ಹಾಗೂ ಹೊಳಲ್ಕೆರೆ ಶಾಸಕ ದಿವಂಗತ ಬಂಡೆ ಬೊಮ್ಮನಹಳ್ಳಿ ಪರಮೇಶ್ವರಪ್ಪ, ಜಗಲೂರಿನ ಶ್ರೀ ಅಶ್ವತ್ಥರೆಡ್ಡಿ ಮುಂತಾದವರು ಉದಾಹರಿಸಬಹುದಾದ ಕೆಲವು ವ್ಯಕ್ತಿಗಳು.

ಒಂದು ಪಕ್ಷದ ಹೆಸರಿನಲ್ಲಿ, ಕಾರ್ಯಕ್ರಮದ ಅಡಿಯಲ್ಲಿ ಆಯ್ಕೆಯಾದ ಸದಸ್ಯರು ತಮ್ಮ ಸದಸ್ಯತನದ ಅವಧಿಯಲ್ಲಿ ಬೇರೊಂದು ಪಕ್ಷಕ್ಕೆ ಹೋದರೆ ಮಾತ್ರ ಪಕ್ಷಾಂತರವೆನ್ನಬಹುದು. ಆದ್ದರಿಂದಲೇ ಶ್ರೀಮತಿ ಇಂದಿರಾ ಗಾಂಧಿಯವರ ಸರ್ವಾಧಿಕಾರಿ ಪ್ರವೃತ್ತಿಯನ್ನು ವಿರೋಧಿಸಿ ಪಕ್ಷದಿಂದ ಹೊರಬಂದು ಜನತಾಪಕ್ಷದ ಅಭ್ಯರ್ಥಿಗಳಾಗಿ ಮತ್ತೆ ಪುನರಾಯ್ಕೆಯಾದ ಶ್ರೀ ಚಂದ್ರಶೇಖರ್ ಮತ್ತು ಶ್ರೀ ಜಗಜೀವನರಾಂ ಪಕ್ಷಾಂತರಿಗಳ ಪಟ್ಟವನ್ನು ತಪ್ಪಿಸಿಕೊಂಡರು. ಆದರೂ ಸೈದ್ಧಾಂತಿಕ ಘರ್ಷಣೆಗಳು ಉಂಟಾದಾಗ, ಪಕ್ಷದ ಆರ್ಥಿಕ, ಸಾಮಾಜಿಕ ಕಾರ್ಯಕ್ರಮಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಬಂದಾಗ ಯಾರನ್ನು ಪಕ್ಷಾಂತರಿ ಎನ್ನುವುದು ಸಮಸ್ಯೆಯಾಗಿದೆ.

ಕರ್ನಾಟಕದಲ್ಲಿ ಪಕ್ಷಾಂತರದ ದೆಸೆಯಿಂದ ಒಂದುಕಾಲದಲ್ಲಿ ರಾಜ್ಯದ ಪ್ರಮುಖ ವಿರೋಧ ಪಕ್ಷವಾಗಿದ್ದ ಪ್ರಜಾಸೋಷಲಿಸ್ಟ್ ಪಕ್ಷ ಹಾಳಾಗಿ ಹೋಯಿತು. ಈಗ ಮತ್ತೊಮ್ಮೆ ಕರ್ನಾಟದಲ್ಲಿ ಪಕ್ಷಾಂತರದ ಪ್ರಭಾವ ಹೆಚ್ಚಾಗುತ್ತಿದೆ. ಇದಕ್ಕೆ ಪಕ್ಷಾಂತರ ಪ್ರಭು ಶ್ರೀಮತಿ ಇಂದಿರಾಗಾಂಧಿಯವರು ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದುದೇ ಕಾರಣವಾಗಿದೆ. ನಮ್ಮ ರಾಜ್ಯದ ಏಳನೇ ಮುಖ್ಯಮಂತ್ರಿ ಶ್ರೀಮಾನ್ ಗುಂಡೂರಾಯರು ತಮ್ಮ ಪಕ್ಷದೊಳಗಿನ ಪ್ರಬಲ ವಿರೋಧವನ್ನು ಎದುರಿಸಿ ಪಕ್ಷಾಂತರಿಗಳ ಪ್ರಭುತ್ವವನ್ನು ಸ್ಥಾಪಿಸಿದ್ದಾರೆ.

ಶ್ರೀಮಾನ್ ದೇವರಾಜ ಅರಸರ ಆಪ್ತರು, ಬೆಂಬಲಿಗರೆಂದು ಹೆಸರು ಪಡೆದಿದ್ದ ಅನೇಕ ಮಂತ್ರಿಗಳು, ವಿವಿಧ ಮಂಡಲಿಗಳ ಅಧ್ಯಕ್ಷರು ಈ ಪಕ್ಷಾಂತರದಲ್ಲಿ ಪ್ರಮುಖರಾಗಿರುವುದು ಜನಸಾಮಾನ್ಯರಿಗೆ ಆಶ್ಚರ್ಯವನ್ನು ಉಂಟುಮಾಡಿದೆ. ಇದೆಲ್ಲ ಸಂಗತಿಗಳಿಗೂ ಕಲಶವಿಟ್ಟಂತೆ ಸಚಿವ ಶ್ರೀ ರಂಗನಾಥ್, ಶ್ರೀ ಸೋಮಣ್ಣನವರೂ ಕಾಂಗ್ರೆಸ್ (ಐ)ಗೆ ಹೋಗಿದ್ದಾರೆ.

ಲೋಕಸಭಾ ಚುನಾವಣೆಗೆ ಮೊದಲು ಕರ್ನಾಟಕದಲ್ಲಿ ನಡೆದ ಜಾತೀಯವಾದಿ, ಸರ್ವಾಧಿಕಾರಿ ವಿರೋಧಿ ಸಮ್ಮೇಳನದಲ್ಲಿ ಶ್ರೀ ದೇವರಾಜ ಅರಸರ ಬದಲಿಗೆ ಅಧ್ಯಕ್ಷತೆ ವಹಿಸಿ ಶ್ರೀಮತಿ ಇಂದಿರಾಗಾಂಧಿಯವರನ್ನು ಸರ್ವಾಧಿಕಾರಿ, ಫ್ಯಾಸಿಸ್ಟ್ ಎಂದೆಲ್ಲಾ ಶ್ರೀ ರಂಗನಾಥ್ ಭಾಷಣ ಮಾಡಿದ್ದರು. ಶ್ರೀಮಾನ್ ರಂಗನಾಥರು ಇಷ್ಟು ಬೇಗ ತಾವು ಮಾಡಿದ ಭಾಷಣವನ್ನು ಮರೆತು ಕಾಂಗ್ರೆಸ್(ಐ) ನಾಯಕರನ್ನು ಓಲೈಸುತ್ತಿರುವುದು ಈ ದೇಶದ ಬೂರ್ಜ್ವಾ ರಾಜಕೀಯದ ಅಂತರಂಗ-ಬಹಿರಂಗಗಳನ್ನು ಬಯಲು ಪಡಿಸಿದೆ. ಅಂತೆಯೇ ಮುಖ್ಯಮಂತ್ರಿಗಳ ಪರಮ ಆಪ್ತರೆಂದು ಹೇಳಿಕೊಳ್ಳುತ್ತಿದ್ದ ಶ್ರೀಮಾನ್ ಸೋಮಣ್ಣನವರೂ ತಮ್ಮ ಆಪ್ತತೆಯನ್ನು ಪಕ್ಷಾಂತರದ ಮೂಲಕ ಚೆನ್ನಾಗಿ ಪ್ರದರ್ಶಿಸಿದ್ದಾರೆ. ಅಧಿಕಾರ ಕಳೆದುಕೊಂಡ ತಕ್ಷಣ ಗೆಳ್ಳ ಎತ್ತಿನ ಬಾಲಹಿಡಿಯುವ ಈ ಪಕ್ಷಾಂತ

[ಕಡೆಯ ಪುಟ ನೋಡಿ]

ಚುನಾವಣಾ ಫಲಿತಾಂಶ ಮತ್ತು ನಮ್ಮ ಜವಾಬ್ದಾರಿ

[ಹಿಂದಿನ ಸಂಚಿಕೆಯಿಂದ]

ಟೀಕೆಯಿಲ್ಲದ ಜನತಾ ವಿಶ್ಲೇಷಣೆ :

ಬೂರ್ಜ್ವಾ – ಭೂಮಾಲಕ ಪಕ್ಷಗಳಾದ ಜನತಾ, ಲೋಕದಳ ಮತ್ತು ಕಾಂಗ್ರೆಸ್(ಯು) ಕೂಡ ಚುನಾವಣಾ ಫಲಿತಾಂಶವನ್ನು ವಿಶ್ಲೇಷಿಸಿದ್ದಾರೆ. ಜನತಾಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ತನ್ನ ಸಾಧನೆಗಳನ್ನು ಮುಂದಿಟ್ಟು "ಜನತಾ ಪಕ್ಷದ ಆಡಳಿತದಲ್ಲಿ ಎಲ್ಲಾ ಜನ ವಿಭಾಗಗಳಿಗೂ ಅನುಕೂಲ ಒದಗಿಸಲು ಕ್ರಮಕೈಗೊಳ್ಳಲಾಗಿತ್ತು, ಎಲ್ಲಕ್ಕಿಂತ ಹೆಚ್ಚಾಗಿ ಅಗತ್ಯ ವಸ್ತುಗಳ ಕೊರತೆಯನ್ನು ನಿವಾರಿಸಿ, ಬೆಲೆಗಳನ್ನು ಇಳಿಸಲಾಯಿತು." ಇಡೀ ಹೇಳಿಕೆಯು ಸುಳ್ಳುಗಳಿಂದ ಕೂಡಿದ್ದು, ಸ್ವಯಂ ಟೀಕೆಯಿಂದ ಕೂಡಿದ ವಿಶ್ಲೇಷಣೆಯೇ ಇಲ್ಲವಾಗಿದೆ. ಚುನಾವಣೆಗಳಲ್ಲಿ ಭಾರಿ ಸೋಲನ್ನು ಅನುಭವಿಸಿದ ಜನತಾಪಕ್ಷ ತನ್ನ ಹಳೆಯ ತಪ್ಪುಗಳಿಂದ ಪಾಠ ಕಲಿಯುವುದೆಂದು ಭಾವಿಸಿದ್ದವರಿಗೆ ಹೇಳಿಕೆಯನ್ನು ನೋಡಿ ತುಂಬಾ ನಿರಾಶೆಯಾಗಿದೆ.

ಚುನಾವಣಾ ಸೋಲಿಗೆ ಕಾರಣಗಳನ್ನು ವಿವರಿಸುತ್ತಾ, ನಿರ್ಣಯ ಈ ರೀತಿ ಹೇಳಿದೆ: "ದುರ್ದೈವವಶಾತ್ ಜನತೆ ಜನತಾ ಪಕ್ಷದ ಸರಕಾರ ಮತ್ತು ಉಸ್ತುವಾರಿ ಸರಕಾರದ ಮಧ್ಯೆ ವ್ಯತ್ಯಾಸಗಳನ್ನು ತಿಳಿಯುವುದರಲ್ಲಿ ವಿಫಲವಾಗಿದೆ. ಚರಣಸಿಂಗರ ಸರಕಾರ ಅಧಿಕಾರಕ್ಕೆ ಬಂದಮೇಲೆ ಮಾತ್ರ ಬೆಲೆಗಳು ಏರಿ, ಅಭಾವ ತಲೆದೋರಿದ್ದಲ್ಲದೆ, ಕಾನೂನು ಮತ್ತು ಸುವ್ಯವಸ್ಥೆ ಕುಸಿಯಿತೆಂಬುದು ಜನಗಳಿಗೆ ಅರ್ಥವಾಗಿಲ್ಲ". ಈ ರೀತಿ ಜನತಾಪಕ್ಷ ತನ್ನೆಲ್ಲಾ ಜವಬ್ದಾರಿಯನ್ನು "ಪಕ್ಷಾಂತರಿ"ಗಳ ಮೇಲೆ ಹೊರಿಸಿ, ತನ್ನ ಸಾಧನೆಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿದೆ. ಜನತಾಪಕ್ಷದ ಅಭಿಪ್ರಾಯದಲ್ಲಿ, ಅದರ ಆಡಳಿತಾವಧಿಯಲ್ಲಿ ಜನಗಳಿಗೆ ಏನೂ ತೊಂದರೆಯಾಗಿಲ್ಲ. ಉಸ್ತುವಾರಿ ಸರಕಾರದ ನಿಷ್ಕ್ರಿಯ ಆಡಳಿತದಿಂದ ಮಾತ್ರ ಅದು ಸಂಸತ್ತಿನಲ್ಲಿ ಬಹುಮತ ಗಳಿಸುವುದು ತಪ್ಪಿಹೋಯಿತು.

ಅಲಿಘಡ ಮತ್ತು ಜವರ್‌ಪೆಡ್‌ಪುರದ ಗಲಭೆಗಳ ಬಗ್ಗೆ ಜನತಾ ಪಕ್ಷದ ಮುಖಂಡರು ಏನೂ ಹೇಳಿಲ್ಲ. ಬೆಲ್ಚಿ ಮತ್ತು ಪಂತನಗರದ ಹತ್ಯಾಕಾಂಡ, ಫರೀದಾಬಾದ್‌ನಲ್ಲಿ ಕಾರ್ಮಿಕರ ಮೇಲೆ ಮಾಡಿದ ಗೋಲಿಬಾರ್ ಇವುಗಳ ಬಗ್ಗೆ ಅವರು ಸಂಪೂರ್ಣವಾಗಿ ಮೌನವಾಗಿದ್ದಾರೆ. ಜನಸಂಘ-ಆರ್.ಎಸ್.ಎಸ್.ಗಳ ಹಾವಳಿ ಬಗ್ಗೆಯಾಗಲೀ, ಸಾಮೂಹಿಕ ಚಳುವಳಿಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಿದಬಗೆಗಾಗಲಿ ಮುಖಂಡರು ಚಕಾರವೆತ್ತಿಲ್ಲ. ಮಿನಿಮಿಸಾ ಮತ್ತು ಕೈಗಾರಿಕಾ ಬಾಂಧವ್ಯ ಮಸೂದೆಯನ್ನುಹೇರಲು ಯತ್ನಿಸಿದ್ದಕ್ಕೆ ಅವರಿಗೆ ಯಾವ ಪಶ್ಚಾತ್ತಾಪವೂ ಇಲ್ಲ.

ಇವೆಲ್ಲವುಗಳ ಮಧ್ಯೆ ಅವರು ಭರವಸೆ ನೀಡುವುದೇನೆಂದರೆ 'ಚುನಾವಣಾ ವಿಫಲತೆಯಿಂದ ಬುದ್ಧಿ ಕಲಿತು, ತಪ್ಪುಗಳನ್ನು ಸರಿಪಡಿಸುತ್ತೇವೆಂದು ಜನಗಳಿಗೆ ಭರವಸೆ ನೀಡುತ್ತೇವೆ' ಎಂದಿದ್ದಾರೆ. ಆದರೆ ಈ ತಪ್ಪುಗಳು ಯಾವುವು ಎಂಬುದನ್ನು ನಿರ್ಣಯ ತಿಳಿಸಿಲ್ಲ. ತಪ್ಪುಗಳು ಯಾವುದು ಎಂಬುದನ್ನು ವಿಮರ್ಶಿಸದೆ, ತಪ್ಪುಗಳಿಂದ ಪಾಠ ಕಲಿಯುತ್ತೇವೆ ಎಂದು ಹೇಳುವುದು ಅರ್ಥರಹಿತವಾದದ್ದು.

ಚರಣಸಿಂಗರೂ ಕೂಡ ಚುನಾವಣೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಚುನಾವಣೆಗಳಲ್ಲಿ ಲೋಕದಳದ ವಿಫಲತೆಗೆ ಬೇರೆ ಕಾರಣಗಳನ್ನು ಹುಡುಕಬೇಕಿಲ್ಲ, ಪ್ರಜಾಸತ್ತೆಯನ್ನು ಉಳಿಸಲು ಎಲ್ಲಾ ವಿರೋಧ ಪಕ್ಷಗಳೂ ಒಂದಾಗಬೇಕೆಂದು ಅರಿತು, ಸಹಮತವುಳ್ಳ ವಿರೋಧ ಪಕ್ಷಗಳೆಲ್ಲಾ ಒಂದಾದರೆ ದೇಶದಲ್ಲಿ ಆರ್ಥಿಕ-ಸಾಮಾಜಿಕ ಬದಲಾವಣೆಯನ್ನು ತರಬಹುದೆಂದು ಕಂಡುಕೊಂಡರೆ, ಐಕ್ಯತೆ ಮತ್ತು ಗರಿಷ್ಠ ಸಹಕಾರವನ್ನು ತರುವುದರಲ್ಲಿ ಕಷ್ಟವೇನೂ ಆಗುವುದಿಲ್ಲವೆಂದಿದ್ದಾರೆ. ಆದರೆ ಚರಣಸಿಂಗರು ಸರ್ವಾಧಿಕಾರಿ ವಿರೋಧಿ ಜನಗಳಿಗೆ ಇರಬೇಕಾದ ಸಾಮಾನ್ಯ ಉದ್ದೇಶಗಳು ಮತ್ತು ಮೌಲ್ಯಗಳು ಯಾವುವು ಎಂಬುದನ್ನು ತಿಳಿಸಿಲ್ಲ.

ಕಾಂಗ್ರೆಸ್(ಯು)ನ ಅಸ್ಥಿರತೆ:

ಕಾಂಗ್ರೆಸ್(ಯು) ಬಗ್ಗೆ ಹೇಳುವುದಾದರೆ ಅದು ಇನ್ನೂ ಚುನಾವಣಾ ಸೋಲಿನ ಆಘಾತದಿಂದ ಚೇತರಿಸಿಕೊಂಡಿಲ್ಲ. ಕಾಂಗ್ರೆಸ್ (ಯು) ನ ಅಧ್ಯಕ್ಷ ಶ್ರೀ ದೇವರಾಜ ಅರಸರು ಕಾಂಗ್ರೆಸ್ (ಐ)ಯೇ ನಿಜವಾದ ಕಾಂಗ್ರೆಸ್ ಎಂದಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಅವರ ಪಕ್ಷ ಅನುಸರಿಸಿದ ಅಸ್ಥಿರ ನೀತಿಯೇ ಪಕ್ಷವನ್ನು ಈ ಸ್ಥಿತಿಗೆ ತಂದಿತೆಂಬುದನ್ನು ಅವರು ಅರಿತಿಲ್ಲ. ಮೊದಲು ಮೊದಲು ಅವರ ಪಕ್ಷ ಕಾಂಗ್ರೆಸ್ (ಐ) ಜೊತೆ ವಿಲೀನವಾಗುವ ಯೋಚನೆಯಲ್ಲಿತ್ತು. ಬೆಂಗಳೂರಿನ ಸಮಾವೇಶದ ನಂತರ ಕಾಂಗ್ರೆಸ್ (ಐ)ಯ ಸರ್ವಾಧಿಕಾರವನ್ನು ವಿರೋಧಿಸಲು ತೀರ್ಮಾನ ತೆಗೆದುಕೊಂಡ ನಂತರವೂ ಅದನ್ನು ಸರಿಯಾಗಿ ಜಾರಿಮಾಡಲು ಹೋಗಲಿಲ್ಲ. ಕೆಲವು ವೇಳೆ ಲೋಕದಳದೊಂದಿಗೆ ವಿಲೀನವಾಗಲು ಯೋಚಿಸಿದ ಪಕ್ಷ ಕೆಲವೊಮ್ಮೆ ಎಡ ಪಕ್ಷಗಳೊಂದಿಗೆ ಸಹಕರಿಸುವ ಬಗ್ಗೆ ಮಾತನಾಡಿತು. ಕೊನೆಗಳಿಗೆಯುವರೆಗೂ ಕಾಂಗ್ರೆಸ್(ಐ)ನ ರಾಜಕೀಯ ನಿಲುವೆಗೂ ಅವರಿಗೂ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸುವುದಕ್ಕೆ ಆ ಪಕ್ಷಕ್ಕೆ ಸಾಧ್ಯವಾಗಲಿಲ್ಲ.

ಚುನಾವಣೆಗಳಲ್ಲಿ ಗಳಿಸಿದ ಪ್ರಚಂಡ ವಿಜಯದ ಭರದಲ್ಲಿ ಕಾಂಗ್ರೆಸ್(ಐ) ಚುನಾವಣಾ ಫಲಿತಾಂಶವನ್ನು ವಿಶ್ಲೇಷಿಸುವ ಗೋಜಿಗೆ ಹೋಗಿಲ್ಲ. ಆದರೆ, ಪಕ್ಷದ ನಾಯಕಿ ಶ್ರೀಮತಿ ಇಂದಿರಾಗಾಂಧಿಯವರ ನಂತರದ ಹೇಳಿಕೆಗಳು ಮುಂದೆ ಆ ಪಕ್ಷ ಯಾವ ದಿಕ್ಕಿನಲ್ಲಿ ಹೋಗಬಹುದೆಂಬುದಕ್ಕೆ ದಿಕ್ಸೂಚಿಯಾಗಿದೆ.

ಕಾಂಗ್ರೆಸ್ (ಐ) ನ ವಿಜಯದ ಕಾರಣಗಳು:

ಈಗಾಗಲೆ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಕಾಂಗ್ರೆಸ್(ಐ) ವಿಜಯವನ್ನು ಜನತೆಯ ಸಿಟ್ಟಿನ ಪರಿಣಾಮವೆಂದು ಹೇಳಿವೆ. ಬೂರ್ಜ್ವಾ ಪತ್ರಿಕೆಗಳು ಸಹಾ ಇದೇ ಅಭಿಪ್ರಾಯವನ್ನು ಹೊಂದಿವೆ. ಗೆಲುವಿಗೆ ಕಾರಣಗಳನ್ನು ಬಹುಮಟ್ಟಿಗೆ ಕೆಳಗೆ ಕಾಣಿಸಿದ ರೀತಿ ಕೊಡಬಹುದು:

1. ಜನತಾಪಕ್ಷದೊಳಗಿನ ಆಂತರಿಕ ಕಚ್ಚಾಟ.
2. ಜನತಾಪಕ್ಷದ ಸರಕಾರ ಅನುಸರಿಸಿದ ನೀತಿಗಳು ಜನಪರವಾಗಿರಲಿಲ್ಲ.
3. ಜನತಾಪಕ್ಷ ಅನುಸರಿಸಿದ ನೀತಿಯನ್ನೇ ಉಸ್ತುವಾರಿ ಸರಕಾರ ಮುಂದುವರೆಸಿದ್ದು.
4. ಕಾಂಗ್ರೆಸ್ (ಯು) ಮತ್ತು ಲೋಕದಳಗಳ ಮೈತ್ರಿ ಜನತೆಯ ಮಧ್ಯೆ ಪರಿಣಾಮ ಬೀರಲು ವಿಫಲವಾದದ್ದು.
5. ಜನತಾಪಕ್ಷದಲ್ಲಿ ಆರೆಸ್ಸೆಸ್-ಜನಸಂಘಗಳ ಪ್ರಬಲ ಹಿಡಿತ ಅಲ್ಪಸಂಖ್ಯಾತರನ್ನು ಮತ್ತು ಹರಿಜನರನ್ನು ಪಕ್ಷದಿಂದ ದೂರ ಮಾಡಿದ್ದು.
6. ಇಂದಿರಾ ವಿರೋಧಿ ಓಟುಗಳು ಒಡೆದುಹೋದದ್ದು.
7. ಬೂರ್ಜ್ವಾ ಪತ್ರಿಕೆಗಳು ಮತ್ತು ಸಂಪನ್ಮೂಲಗಳ ಸಹಾಯದಿಂದ ಕಾಂಗ್ರೈನ 'ಸುಭದ್ರ ಸರಕಾರ'ದ ಘೋಷಣೆ ದೇಶದ ಮೂಲೆ ಮೂಲೆಗೆ ತಲುಪಿದ್ದು.
8. ಪ. ಬಂಗಾಳ, ತ್ರಿಪುರಾ ಮತ್ತು ಕೇರಳ ರಾಜ್ಯಗಳನ್ನು ಬಿಟ್ಟರೆ ಬೇರೆಕಡೆ ಕಾಂಗ್ರೈಗೆ ಬಲವಾದ ಬದಲಿಯನ್ನು ಜನತೆಯ ಮುಂದಿಡಲು ಸಾಧ್ಯವಾಗದೇ ಹೋದದ್ದು.

ಈ ಎಲ್ಲಾ ಅಂಶಗಳಿಂದ ಸ್ಪಷ್ಟವಾಗುವ ಸಂಗತಿ ಎಂದರೆ, ಕೇರಳ, ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳನ್ನು ಬಿಟ್ಟರೆ, ದೇಶದ ಇತರ ಕಡೆಗಳಲ್ಲಿ ಕಾಂಗ್ರೈಗೆ ಪರ್ಯಾಯವಾದ ಪಕ್ಷವೊಂದು ಇಲ್ಲದೇ ಹೋದದ್ದರಿಂದ ಜನರು ಅನಿವಾರ್ಯವಾಗಿ ತಮ್ಮ ಸಿಟ್ಟನ್ನು ಕಾಂಗ್ರೈಗೆ ಓಟು ಕೊಡುವುದರ ಮೂಲಕ ತೋರಿಸಿದರು. ಮತದಾರರ ಪಟ್ಟಿಯಲ್ಲಿನ ದೋಷಗಳಿಂದ ಕಾಂಗ್ರೈಗೆ ಕೇವಲ 42.58 ಮತಗಳಿಂದ ಶೇ. 66.58 ಸ್ಥಾನಗಳನ್ನು ಗಳಿಸುವುದು ಸಾಧ್ಯವಾಯಿತು. 84 ಮಿಲಿಯನ್ ಓಟು ಗಳಿಸಿದ ಕಾಂಗ್ರೈ 351 ಸ್ಥಾನಗಳನ್ನು ಪಡೆಯಿತು. ಜನತಾಪಕ್ಷ, ಲೋಕದಳ ಮತ್ತು ಕಾಂಗ್ರೆಸ್ (ಯು) ಒಟ್ಟು 65 ಮಿಲಿಯನ್ ಮತಗಳನ್ನು ಗಳಿಸಿ ಕೇವಲ 85 ಸ್ಥಾನಗಳನ್ನು ಪಡೆದಿವೆ.

ಆದರೆ, ಇಂದಿರಾಗಾಂಧಿಯವರ ಲೆಕ್ಕಾಚಾರವೇ ಬೇರೆ. ಇಂದಿರಾಗಾಂಧಿಯವರ ಅಭಿಪ್ರಾಯದಲ್ಲಿ ತಮಗೆ ಬಂದ ಓಟುಗಳು ಕೇವಲ ಜನರ ಸಿಟ್ಟಿನ ಮತಗಳಲ್ಲ, ಇವು ಪಕ್ಷದ ನೀತಿ ಮತ್ತು ಕಾರ್ಯಕ್ರಮಗಳಿಗೆ ಸಿಕ್ಕಿದ ಬೆಂಬಲ. ಮೊದಲು ಸಿಕ್ಕಿದ 431 ಸ್ಥಾನಗಳ ಪೈಕಿ ಶೇಕಡ 40ರಷ್ಟು ಸ್ಥಾನಗಳನ್ನು ಕಾಂಗ್ರೈ ಅಲ್ಪ ಮತಗಳಿಂದ ಜಯಗಳಿಸಿದೆ. ಉತ್ತರ ಪ್ರದೇಶ ರಾಜ್ಯದಲ್ಲಿ ಮೊದಲ ಸುತ್ತಿನಲ್ಲಿ ಪ್ರಕಟಿಸಲಾದ 70 ಸ್ಥಾನಗಳನ್ನು ಕಾಂಗ್ರೈಪಕ್ಷ ಕೇವಲ ಶೇಕಡ 35ರಷ್ಟು ಮತಗಳನ್ನು ಪಡೆಯುವುದರ ಮೂಲಕ ಗಳಿಸಿದೆ, ಆದೇ ಜನತಾ ಮತ್ತು ಲೋಕದಳಗಳು ಗಳಿಸಿದ ಒಟ್ಟು ಮತಗಳು ಶೇ. 50 ರಷ್ಟು. ಇಂದಿರಾಗಾಂಧಿಯವರಿಗೆ ಸಂಸತ್ತಿನಲ್ಲಿ ಮೂರನೇ ಎರಡರಷ್ಟು ಬಹುಮತ ಸಿಕ್ಕಿದರೂ ಬಹುಜನರ ಮತಗಳಿಸುವುದರಲ್ಲಿ ಕಾಂಗ್ರೈ ವಿಫಲವಾಗಿದೆಯೆಂದು ಎಲ್ಲಾ ಚುನಾವಣಾ ಪಂಡಿತರ ಅಭಿಪ್ರಾಯ. ನೂರಕ್ಕೆ 57 ಜನ ಇಂದಿರಾಗಾಂಧಿಯವರ ವಿರುದ್ಧ ಓಟು ಚಲಾಯಿಸಿದ್ದಾರೆ. ಆದ್ದರಿಂದಲೇ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಚುನಾವಣಾ ಪದ್ಧತಿಯಲ್ಲಿ ಸುಧಾರಣೆಯಾಗಬೇಕೆಂದು ಹೇಳುತ್ತಿರುವುದು.

ಇಂದಿರಾಗಾಂಧಿಯುವರು ಈ ಚುನಾವಣೆಯಲ್ಲಿ ಪಡೆದ ಶೇಕಡಾವಾರು ಓಟುಗಳ ಸಂಖ್ಯೆಗಿಂತ, 1977ರಲ್ಲಿ ತುರ್ತು ಪರಿಸ್ಥಿತಿ ವಿರೋಧಿ ಮತಗಳನ್ನು ಪಡೆದು ಅಧಿಕಾರಕ್ಕೆ ಬಂದ ಜನತಾಪಕ್ಷ ಇದಕ್ಕಿಂತ ಹೆಚ್ಚು ಶೇಕಡಾವಾರು ಮತಗಳನ್ನು ಪಡೆದಿತ್ತು.

ಪ್ರಜಾಸತ್ತೆಗಾಗಿ ಮುಂದುವರೆಯುವ ಹೋರಾಟ :

ವಿವಿಧ ರಾಜಕೀಯ ಪಕ್ಷಗಳು ನಡೆಸಿರುವ ಚುನಾವಣಾ ಫಲಿತಾಂಶಗಳ ವಿಶ್ಲೇಷಣೆಯನ್ನು ನೋಡಿದರೆ ಕೇವಲ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಮಾತ್ರ ಗಂಭೀರ ಚಿಂತನೆ ಮತ್ತು ಮುನ್ನೋಟದ ವಿಮರ್ಶೆಯಿಂದ ಸರಿಯಾದ ತೀರ್ಮಾನಕ್ಕೆ ಬರಲು ಯತ್ನಿಸಿವೆ.

ಕಾಂಗ್ರೈಗೆ ಸಿಕ್ಕಿರುವ ನಿಚ್ಚಳ ಬಹುಮತದಿಂದ ಜನಗಳ ಮೂಲಭೂತ ಸಮಸ್ಯೆಗಳು ಬಗೆಹರಿಯುತ್ತವೆಂದು ನಿರೀಕ್ಷಿಸುವುದು ತಪ್ಪು. ಬಂಡವಾಳಶಾಹಿ ಪದ್ಧತಿಯ ಬೆಳವಣಿಗೆಯಿಂದ ಉಂಟಾಗುವ ಬಿಕ್ಕಟ್ಟನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಹಣದುಬ್ಬರವನ್ನು ತಡೆಯಲು ಸಾಧ್ಯವಿಲ್ಲ. ಸಾಧಿಸಿರುವ ಅಲ್ಪಸ್ವಲ್ಪ ಪ್ರಗತಿಯ ಫಲ ಸಮಾಜದ ತೀರಾ ಕೆಳಗಿನ ಸ್ತರಗಳಲ್ಲಿ ಬದುಕುತ್ತಿರುವವರಿಗೆ ತಲುಪಿಲ್ಲ. ಬಡತನದ ರೇಖೆಯ ಕೆಳಗೆ ಬದುಕುವ ಜನರ ಸಂಖ್ಯೆ ಸತತವಾಗಿ ಏರುತ್ತಿದೆ. ವ್ಯವಸಾಯ ಉತ್ಪನ್ನಗಳ ಬೆಲೆಗಳು ಇಳಿದಿವೆ. ಅಗತ್ಯವಸ್ತುಗಳ ಕೊರತೆಯಿದೆ. ಬಡಜನರಿಗೆ ಕೊಂಡುಕೊಳ್ಳುವ ಶಕ್ತಿಯೇ ಇಲ್ಲ. ಭೂ ಸುಧಾರಣೆಯ ಬಗ್ಗೆ ದೊಡ್ಡ ರೀತಿಯ ಪ್ರಚಾರ ಕೇಳಿ ಬರುತ್ತಿದ್ದರೂ ಭೂ ಸಂಬಂಧಗಳು ಹಾಗೆಯೇ ಉಳಿದಿವೆ. ಕಳೆದ ಮೂವತ್ತೆರಡು ವರ್ಷಗಳ ನಮ್ಮ ಅನುಭವದಲ್ಲಿ ಯಾವ ಸರಕಾರವೂ ಕೇವಲ ಮೂರನೇ ಎರಡರಷ್ಟು ಬಹುಮತ ಇದ್ದ ಮಾತ್ರಕ್ಕೆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ ಬಂಡವಾಳಶಾಹಿ ಪದ್ಧತಿಯ ಆರ್ಥಿಕ ಬಿಕ್ಕಟ್ಟು, ಬೆಲೆ ಏರಿಕೆ ಮತ್ತು ನಿರುದ್ಯೋಗದಂತಹ ಸಮಸ್ಯೆಗಳನ್ನು ಬಗೆಹರಿಸಲು ಭಿನ್ನವಾದ ವರ್ಗನೀತಿಯನ್ನು ಅನುಸರಿಸಬೇಕಾಗುತ್ತದೆ. ಆದ್ದರಿಂದ ಸಂಜಯನ ಬಹುಪಾಲು ಬೆಂಬಲಿಗರನ್ನು ಒಳಗೊಂಡಿರುವ ಇಂದಿರಾಗಾಂಧಿಯವರ ಬಹುಮತ ದೇಶದ ಸಮಸ್ಯೆಗಳನ್ನು ಬಗೆಹರಿಸುತ್ತದೆ ಅಥವಾ ಸುಭದ್ರತೆ ನೀಡುತ್ತದೆ ಎನ್ನುವುದು ವ್ಯರ್ಥಾಲಾಪ ಅಷ್ಟೇ. ಈ ಬಗ್ಗೆ ಸಿ. ಪಿ. ಐ. (ಎಂ) ಪೊಲಿಟ್‌ಬ್ಯೂರೋ ಹೇಳಿಕೆಯು "ಯಾವ ಜನ ಕಾಂಗ್ರೈಗೆ ಮತ ಕೊಟ್ಟರೋ ಅದೇ ಜನ ಶೀಘ್ರದಲ್ಲಿಯೇ ಕಾಂಗ್ರೈ ನೀತಿಯ ವಿರುದ್ಧ ತಿರುಗುವುದನ್ನು ನೋಡಬಹುದು. ಜನಗಳ ಸಮಸ್ಯೆಗಳು ದೇಶಾದ್ಯಂತ ಪ್ರತಿಭಟನೆಗಳನ್ನು ಹಬ್ಬಿಸಬಹುದು. ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಅನ್ನಕ್ಕಾಗಿ ನಡೆಯುವ ಹೋರಾಟಗಳು ಒಂದೇ ಹೋರಾಟವಾಗಿ ಮುನ್ನಡೆಯುತ್ತವೆ".

ಪ್ರಜಾಸತ್ತೆಗೆ ನಿಜವಾದ ಅಪಾಯವಿದೆ, ಈ ಅಪಾಯದ ವಿರುದ್ಧ ನಾವು ಹೋರಾಡಲೇಬೇಕು, ಹೋರಾಡುತ್ತೇವೆ. "ಸವಾಲನ್ನು ಎದುರಿಸಲು ಯಾವ ಸಂಶಯ, ಸಂಕೋಚಗಳೂ ಇರುವುದೂ ಬೇಡ. ಪ್ರಜಾಸತ್ತಾತ್ಮಕ ಹಕ್ಕುಗಳ ಉಳಿವಿಗಾಗಿ ಹಾಗೂ ಸರ್ವಾಧಿಕಾರಿ ಶಕ್ತಿಗಳ ದಾಳಿಯ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿ." ●

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಕೇರಳ ವಿಧಾನಸಭಾ ಚುನಾವಣೆ ವಿಜಯೋತ್ಸವ ಆಚರಣೆ

ತಾ. 21-1-80 ರಂದು ಕೇರಳ ವಿಧಾನಸಭಾ ಚುನಾವಣೆಗಳಲ್ಲಿ ಸಿ.ಪಿ.ಐ.(ಎಂ) ನೇತೃತ್ವದ ಎಡ ಮತ್ತು ಪ್ರಜಾಸತ್ತಾತ್ಮಕರಂಗ ನಿಚ್ಚಳ ಬಹುಮತವನ್ನು ಪಡೆದಿದ್ದಕ್ಕಾಗಿ, ಉ.ಕ. ಜಿಲ್ಲೆ ದಾಂಡೇಲಿಯಲ್ಲಿ ತಾ 23-1-80 ರಂದು ಸಿ. ಪಿ. ಐ.(ಎಂ) ಹಾಗೂ ಸಿ.ಐ.ಟಿ.ಯು. ಘಟಕಗಳು ವಿಜಯೋತ್ಸವವನ್ನು ಅತ್ಯಂತ ಉತ್ಸಾಹದಿಂದ ಆಚರಿಸಿದವು.

ಕಿಕ್ಕಿರಿದು ನೆರೆದಿದ್ದ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಕಾಂ.ಜಿ.ವಿ. ಪವಾರ, ಎಂ ಜೆ. ಜನ್ನು ಮತ್ತು ಕಾಂ. ರಾಜೇಂದ್ರಪ್ರಸಾದ್ ಇವರು ಲೋಕಸಭಾ ಚುನಾವಣೆಗಳ ನಂತರ ದೇಶದಲ್ಲಿ ಉಂಟಾಗಿರುವ ರಾಜಕೀಯ ಪರಿಸ್ಥಿತಿಯಲ್ಲಿ ಕೇರಳ ರಾಜ್ಯದ ಚುನಾವಣಾ ಫಲಿತಾಂಶಕ್ಕಿರುವ ಮಹತ್ವವನ್ನು ವಿವರಿಸಿದರು. ದುಡಿಯುವ ಜನತೆಯ ಮೇಲೆ, ಶ್ರೀಸಾಮಾನ್ಯನ ಮೇಲೆ, ವಿದ್ಯಾರ್ಥಿ, ಯುವಜನತೆಯ ಮೇಲೆ ಬರಲಿರುವ ದಿನಗಳಲ್ಲಿ ದೊಡ್ಡ ಜವಾಬ್ದಾರಿ ಇದೆ. ದೇಶದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಉಳಿಸಿ ಬೆಳೆಸಲು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಹಿಂದೆಂದಿಗಿಂತಲೂ ಈಗ ಅಧಿಕವಾಗಿದೆ ಎಂದರು. ಕಾಂಗ್ರೆಸ್(ಐ)ಗೆ ತಕ್ಕ ಉತ್ತರ ನೀಡಿರುವ ಕೇರಳ ಜನತೆಯನ್ನು ಅಭಿನಂದಿಸಲಾಯಿತು.

ಕಾಂ. ಬಿ. ಟಿ. ನಾಯ್ಕರ ಆಭಾರ ಮನ್ನಣೆಯ ನಂತರ ಆಮಂತ್ರಿತರಿಗೂ ನೆರೆದಿದ್ದ ಜನತೆಗೂ ಸಿಹಿ ಹಂಚಲಾಯಿತು.

* * *

ಬೆಂಗಳೂರು ಜಿಲ್ಲಾ, ದೊಡ್ಡಬಳ್ಳಾಪುರದಲ್ಲಿ ತಾ॥ 28-1-1980 ರಂದು ಸಿ ಪಿ ಐ.(ಎಂ) ಹಾಗೂ ಸಿ ಪಿ.ಐ. ಪಕ್ಷಗಳು ಜಂಟಿಯಾಗಿ ವಿಜಯೋತ್ಸವವನ್ನು ಆಚರಿಸಲಾಯಿತು ದೊಡ್ಡಬಳ್ಳಾಪುರದ ಪುರಭವನದಲ್ಲಿ ನಡೆದ ಈ ಸಮಾರಂಭಕ್ಕೆ ಸಭಾಂಗಣದ ತುಂಬಾ ಸೇರಿದ್ದ ಜನ, ಕೊನೆಗೆ ಜಾಗ ಸಾಲದೆ ಹೊರಗೆ ನಿಲ್ಲಬೇಕಾಯಿತು. ಪ್ರಾರಂಭದಲ್ಲಿ ಎಸ್. ಎಫ್. ಐ. ಮುಖಂಡ ಕಾಂ. ಬಸವಲಿಂಗಪ್ಪನವರು ಕ್ರಾಂತಿ ಗೀತೆಗಳನ್ನು ಹಾಡುವುದರ ಮೂಲಕ ಸಮಾರಂಭ ಪ್ರಾರಂಭವಾಯಿತು. ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಮುಗುವಾಳಪ್ಪನವರು ವಹಿಸಿದ್ದರು. ಸ್ಥಳೀಯ ಸಿ. ಪಿ. ಐ. ಮುಖಂಡ ಕಾಂ. ರಾಮಾಂಜನೇಯರವರು ಕೇರಳ ಜನತೆಯನ್ನು ವಿಜಯಕ್ಕಾಗಿ ಅಭಿನಂದಿಸಿದರು. ಮುಖ್ಯ ಅತಿಥಿಯಾಗಿದ್ದ ಭಾರತ ವಿದ್ಯಾರ್ಥಿ ಫೆಡರೇಶನ್ನಿನ ರಾಜ್ಯಶಾಖೆ ಅಧ್ಯಕ್ಷ ಕಾಂ. ಇಕ್‌ಬಾಲ್ ಹುಸೇನ್, ಎಲ್ಲಿ ಕಾಂಗ್ರೆಸ್ (ಐ)ಗೆ ಪ್ರತಿಯಾದ ಸಮರ್ಥ ನಾಯಕತ್ವ ನೀಡಲು ಸಾಧ್ಯವಿದೆಯೋ ಅಂತಹಕಡೆಗಳಲ್ಲಿ ಇಂದಿರಾ ಗಾಳಿಯನ್ನು ಯಶಸ್ವಿಯಾಗಿ ತಡೆಯಲು ಸಾಧ್ಯವಾಗಿದೆ, ಇದಕ್ಕೆ ಲೋಕಸಭಾ ಚುನಾವಣೆಗಳ ಫಲಿತಾಂಶ ಹಾಗೂ ಕೇರಳ ವಿಧಾನಸಭಾ ಚುನಾವಣೆಗಳೇ ಸಾಕ್ಷಿ. ವಿಜಯೋತ್ಸವವನ್ನು ಎರಡು ಪಕ್ಷಗಳೂ ಸೇರಿ ಒಂದೇ ವೇದಿಕೆಯಲ್ಲಿ ನಡೆಯುತ್ತಿರುವುದು ಸಂತಸಕರವೆಂದರು. ಕೊನೆಯಲ್ಲಿ ಕಾಂ. ರಾಮಭದ್ರಯ್ಯನವರು ವಂದನಾರ್ಪಣೆ ಭಾಷಣವನ್ನು ಮಾಡಿದರು.

* * *

ಇತ್ತೀಚೆಗೆ ನಡೆದ ಲೋಕಸಭೆ ಮತ್ತು ಕೇರಳದ ವಿಧಾನಸಭೆ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ಸಿನ ಸರ್ವಾಧಿಕಾರಿ ಶಕ್ತಿಯನ್ನೂ, ಜಾತೀಯ ಶಕ್ತಿಯನ್ನೊಳಗೊಂಡ ಜನತಾಪಾರ್ಟಿಯನ್ನೂ ಸಂಪೂರ್ಣವಾಗಿ ಪರಾಭವಗೊಳಿಸಿ. ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಎಡ ಮತ್ತು ಪ್ರಜಾಪ್ರಭುತ್ವರಂಗವನ್ನು ಗೆಲ್ಲಿಸಿದ ಪಶ್ಚಿಮ ಬಂಗಾಲ, ತ್ರಿಪುರಾ, ಕೇರಳದ ಮತದಾರರನ್ನು ಅಭಿನಂದಿಸುವ ವಿಜಯೋತ್ಸವ ತಾ. 26 ರಂದು ಗಣರಾಜ್ಯದ ದಿವಸ ಬಿಜಾಪುರದಲ್ಲಿ ಆಚರಿಸಲ್ಪಟ್ಟಿತು. ಎರಡೂ ಕಮ್ಯುನಿಸ್ಟ್ ಪಾರ್ಟಿ, ಅರಸ್ ಕಾಂಗ್ರೆಸ್, ರಿಪಬ್ಲಿಕನ್ ಪಾರ್ಟಿ, ವಿದ್ಯಾರ್ಥಿ ಫೆಡರೇಶನ್ ಮತ್ತು ಕಾರ್ಮಿಕ ಸಂಘಗಳು ಇದರಲ್ಲಿ ಭಾಗವಹಿಸಿದ್ದವು. ತಾ॥ 26ರಂದು ಸಂಜೆ 4 ಗಂಟೆಗೆ ಗಾಂಧಿಚೌಕದಿಂದ ಎಲ್ಲ ಪಾರ್ಟಿಯ ಮುಖಂಡರನ್ನೊಳಗೊಂಡ ಮೆರವಣಿಗೆ ಘೋಷಣೆ ಕೂಗುತ್ತ ಊರಲ್ಲಿ ಸುತ್ತಾಡಿ ಸಂಜೆ 6 ಗಂಟೆಗೆ ಬಸವೇಶ್ವರ ಚೌಕಿನಲ್ಲಿ ಸಾರ್ವಜನಿಕ ಸಭೆ ಪರ್ಯವಸಾನಗೊಂಡಿತು. ಸಿ. ಪಿ. ಐ. ಮುಖಂಡ ಎಲ್.ಬಿ. ಲಾಯದಗುಂದಿಯವರು ಅಧ್ಯಕ್ಷತೆ ವಹಿಸಿದ್ದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡರಾದ ಎನ್. ಕೆ. ಉಪಾಧ್ಯಾಯ, ಅರಸ್ ಕಾಂಗ್ರೆಸ್ಸಿನ ಪಿ. ಎಸ್. ಪಾಟೀಲ ವಕೀಲ, ತುಕಾರಾಂ ಚಂಚಲಕರ ಮತ್ತು ನಗರಸಭೆಸದಸ್ಯರಾದ ಪೀರಜಾದೆಯವರೂ, ಕಮ್ಯುನಿಸ್ಟ್ ಪಾರ್ಟಿಯ ಚಂಚಲಕರ ಅವರೂ ಭಾಷಣ ಮಾಡಿ ಇಂದಿರಾಗಾಂಧಿ ದೇಶದ ಸಮಸ್ಯೆಗಳನ್ನು ಹಿಂದೆಯೂ ಬಗೆಹರಿಸಿಲ್ಲ, ಇನ್ನೂ ಮುಂದೆಯೂ ಬಗೆಹರಿಸಲಿಕ್ಕೆ ಸಾಧ್ಯವಿಲ್ಲ, ಯಾಕೆಂದರೆ ಹಿರೇ ಬಂಡವಾಳದಾರ ಭೂಮಾಲಕರ ಪ್ರತಿನಿಧಿಯಾಗಿರುವುದರಿಂದ ಬಂಡವಾಳದಾರರ ಹಿತವಷ್ಟೇ ಮಾಡಲು ಸಾಧ್ಯವೆಂದೂ, ಎಡ ಮತ್ತು ಪ್ರಜಾಪ್ರಭುತ್ವ ಸರಕಾರದಿಂದಲೇ ಜನರ ಸಮಸ್ಯೆ ಬಗೆಹರಿಯಲು ಸಾಧ್ಯವೆಂದೂ ಹೇಳಿ, ಪ. ಬಂಗಾಳ, ತ್ರಿಪುರಾ ಸರಕಾರಗಳು ಸಾಧಿಸಿದ ಕಾರ್ಯಗಳನ್ನು ವಿವರಿಸಿದರು. ಜನತಾ; ಲೋಕದಳಗಳಂತೆ ಬಂಡವಾಳಶಾಹಿಪಕ್ಷಗಳು ಇಂದಿರಾ ಪ್ರಭಾವದಿಂದಲ್ಲದಿದ್ದರೂ, ತಮ್ಮ ಅಸಮರ್ಥ ಆಡಳಿತೆಯಿಂದ ಚುನಾವಣೆಯಲ್ಲಿ ಸೋಲನ್ನನುಭವಿಸಿ, ಇಂದಿರಾ ಕಾಂಗ್ರೆಸ್ ಆರಿಸಿ ಬರುವಂತೆ ಅಪ್ರತ್ಯಕ್ಷ ರೀತಿಯಿಂದ ಸಹಾಯ ಮಾಡಿದಾಗ, ತಮ್ಮ ಸಮರ್ಥ ಆಡಳಿತೆ, ನಿಶ್ಚಿತ ಕಾರ್ಯಗಳಿಂದ ಇಂದಿರಾ ಕಾಂಗ್ರೆಸ್ಸನ್ನು ಸಂಪೂರ್ಣಸೋಲಿಸಲು ಸಾಧ್ಯವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಎಡರಂಗವನ್ನು ಅಭಿನಂದಿಸಿದರು. ಕಮ್ಯುನಿಸ್ಟ್ ಪಾರ್ಟಿಯನ್ನು ಬೆಳೆಸುವಲ್ಲಿ, ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಸಂಘಟಿಸುವಲ್ಲಿ ಎಲ್ಲರೂ ಸಹಕರಿಸಬೇಕೆಂದು ಕೇಳಿಕೊಂಡರು. ಅಮೇರಿಕದ ಸಾಮ್ರಾಜ್ಯಶಾಹಿಗಳು ಅಫಘಾನಿಸ್ಥಾನದ ಸ್ವಾತಂತ್ರ್ಯವನ್ನು ಕಬಳಿಸಲು ಪ್ರಯತ್ನಿಸಿದಾಗ, ಅದನ್ನು ಸಂರಕ್ಷಿಸುವ ಉದ್ದೇಶದಿಂದ ರಷ್ಯ ದೇಶ ತನ್ನ ಸೈನ್ಯವನ್ನು ಅಫಘಾನಿಸ್ಥಾನಕ್ಕೆ ಕಳುಹಿಸಿ ಅಲ್ಲಿಯ ಪುರೋಗಾಮಿ ಸರಕಾರಕ್ಕೆ ಸಹಾಯ ಮಾಡಿದ್ದನ್ನು ಬೆಂಬಲಿಸಲಾಯಿತು. ●

ಕಾರ್ಮಿಕರ ವಿವಾದದಲ್ಲಿ ಪೋಲೀಸರ ಹಸ್ತಕ್ಷೇಪ

ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನಲ್ಲಿರುವ ವಿಮಾನಾ ಎಸ್ಟೇಟ್‌ನ ಸುಮಾರು 34 ಜನ ಕಾರ್ಮಿಕರು ತಮಗೆ ಕರ್ನಾಟಕದ ಕಾರ್ಮಿಕ ಕಮಿಷನರ್‌ರವರ ಮುಂದೆ ಆಗಿರುವ ಕೈಗಾರಿಕಾವಾರು ಒಪ್ಪಂದದಂತೆ ಸಂಬಳ ಕೊಡದೇ ಇರುವುದನ್ನು ಪ್ರತಿಭಟಿಸಿ, ಹೆಚ್ಚಿಗೆ ಸಂಬಳದ ಬೇಡಿಕೆಯನ್ನು ಇಟ್ಟು ತಾ. 12-1-1980 ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸುತ್ತಿದ್ದಾರೆ.

ಸದರಿ ತೋಟದ ಮಾಲೀಕರು ಕಾರ್ಮಿಕರ ನ್ಯಾಯಬದ್ಧವಾದ ಬೇಡಿಕೆಯನ್ನು ಈಡೇರಿಸಲು ಮುಂದೆ ಬರುವುದು ಬಿಟ್ಟು ಕಾರ್ಮಿಕರ ಮುಷ್ಕರವನ್ನು ಮುರಿಯಲು ಶತಪ್ರಯತ್ನ ನಡೆಸುತ್ತಿದ್ದಾರೆ. ಹಾಸನದ ಲೇಬರ್ ಆಫೀಸರು ಕರೆದ ಪಂಚಾಯ್ತಿಗಳಿಗೆ ತಪ್ಪಿಸಿಕೊಂಡು ಕಾರ್ಮಿಕರು ಮುಷ್ಕರಕ್ಕೆ ಇಳಿಯುವಂತೆ ಮಾಡಿದರು. ಕೈಗಾರಿಕಾ ವಿವಾದದಲ್ಲಿ ಪೋಲೀಸರು ಮಧ್ಯ ಪ್ರವೇಶ ಮಾಡಕೂಡದೆಂದಿದ್ದರೂ ತಾ. 19-1-80 ರಂದು ಸಕಲೇಶಪುರದ ಸರ್ಕಲ್ ಇನ್ಸ್‌ಪೆಕ್ಟರ್ ಕೈಗಾರಿಕಾ ವಿವಾದದಲ್ಲಿ ಮಧ್ಯ ಪ್ರವೇಶಮಾಡಿ ಲೇಬರ್ ಆಫೀಸರ್ ನ್ಯಾಯವಾದ ಒಂದು ತೀರ್ಮಾನ ಮಾಡಲು ಅಡ್ಡಿಯಾದರು. ಕಾರ್ಮಿಕರ ಹಾಗೂ ಕಾರ್ಮಿಕ ಮುಖಂಡರ ಮೇಲೆ ಕಾನೂನನ್ನು ಉಲ್ಲಂಘಿಸಿದರೆ ಉಗ್ರಶಿಕ್ಷೆಗೊಳಪಡಿಸುವುದಾಗಿ ಬೆದರಿಕೆ ಹಾಕಿ ಮಾಲೀಕರಿಗೆ ಸಕ್ರಿಯವಾಗಿ ಬೆಂಬಲ ಕೊಡುತ್ತಿದ್ದಾರೆ. ಇದು ಖಂಡನೀಯ. ಪೋಲೀಸರ ಬೆಂಬಲದಿಂದ ಹೊರಗಿನಿಂದ ನೂರಾರು ಕರಿ ಕಾಲುಗಳನ್ನು ತಂದು ತುರ್ತಿನ ಕೆಲಸ ಮಾಡಿಸಲು ಪ್ರಾರಂಭಿಸಿದ್ದಾರೆ.

ಕಾರ್ಮಿಕರಿಗೆ ಕಡಿಮೆ ಕೂಲಿ ಕೊಟ್ಟು ದುಡಿಸಿ ತಮ್ಮ ಸಂಪತ್ತನ್ನು ವೃದ್ಧಿಗೊಳಿಸುತ್ತಿರುವ ಮಾಲೀಕರು ಕಾರ್ಮಿಕರ ವಿವಿಧ ಕಲ್ಯಾಣ ಕಾಯ್ದೆಗಳನ್ನು ನಿರಾತಂಕವಾಗಿ ಉಲ್ಲಂಘಿಸುತ್ತಿದ್ದರೂ ಅವರನ್ನು ಶಿಕ್ಷಿಸದ ಈ ಸರಕಾರಿ ಅಧಿಕಾರಿಗಳು ಶಾಂತಿಯುತವಾಗಿ ಮುಷ್ಕರ ನಡೆಸುತ್ತಿರುವ ಕಾರ್ಮಿಕರನ್ನು ಬೆದರಿಸುತ್ತಿರುವುದು ನಾಚಿಕೆಗೇಡು. ಎಷ್ಟೋ ದಾಳಿ ದಬ್ಬಾಳಿಕೆಗಳಿದ್ದರೂ ತಮ್ಮ ಜೀವನವನ್ನು ಉತ್ತಮಪಡಿಸಲು ವೇತನ ಹಾಗೂ ಇತರೆ ಸವಲತ್ತುಗಳಿಗೋಸ್ಕರ ಚಳುವಳಿ ನಡೆಸುವುದು ಅನಿವಾರ್ಯ.

ಶೋಷಣೆ, ದಬ್ಬಾಳಿಕೆಗಳ ವಿರುದ್ಧ ಸಿಡಿದೆದ್ದು ಹೋರಾಟಕ್ಕಿಳಿದಿರುವ ಕಾರ್ಮಿಕರ ಜಯಕ್ಕೆ ಎಲ್ಲಾ ವಿಭಾಗದ ದುಡಿಯುವ ಜನತೆ ತಮ್ಮ ಸಹಾಯ ಸಹಕಾರವನ್ನು ಕೊಡಬೇಕು. ಪೋಲೀಸರು ಕೈಗಾರಿಕಾ ವಿವಾದದಲ್ಲಿ ಮಧ್ಯಪ್ರವೇಶ ಮಾಡುವುದನ್ನು ಖಂಡಿಸಬೇಕೆಂದು ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ವಿ. ಸುಕುಮಾರ್ ವಿನಂತಿ ಮಾಡಿದ್ದಾರೆ. ●

ಸೀಮೆಎಣ್ಣೆಯನ್ನು ಸೂಕ್ತರೀತಿಯಲ್ಲಿ ವಿತರಣೆ ಮಾಡಲು ಒತ್ತಾಯ

ದ.ಕ. ಜಿಲ್ಲೆ, ಬಂಟ್ವಾಳ ತಾಲ್ಲೂಕಿನ ಕಡೇಶ್ವಾಲ್ಯಗ್ರಾಮ ಸಹಕಾರ ಸಂಘದಲ್ಲಿ ವಿತರಣೆ ಮಾಡುತ್ತಿದ್ದ ಚಿಮಿಣಿ ಎಣ್ಣೆಯನ್ನು ಕಳೆದ ಒಂದು ತಿಂಗಳಿಂದ ನಿಲ್ಲಿಸಿದ್ದರಿಂದ ಇಲ್ಲಿನ ಬೀಡಿ ಕಾರ್ಮಿಕರಿಗೂ ರೈತರಿಗೂ ಇತರ ದುಡಿಯುವ ಬಡ ಜನತೆಗೂ ನಿತ್ಯರಾತ್ರಿ ಬೆಳಕು ಉರಿಸಲು ಕಷ್ಟವೆನಿಸಿದನ್ನು ತಾ॥ 27ರಂದು ಕಡೇಶ್ವಾಲ್ಯದಲ್ಲಿ ಜರಗಿದ ಬೀಡಿ ಕಾರ್ಮಿಕರ ಸಭೆ ಗಮನಿಸಿದೆ. ಮಾತ್ರವಲ್ಲ ಸರಕಾರವು ಈ ಕೂಡಲೇ ಈ ಗ್ರಾಮದಲ್ಲಿ ಎಲ್ಲಾ ನಾಗರಿಕರಿಗೆ ಬೇಕಾಗುವಷ್ಟು ಚಿಮಿಣಿ ಎಣ್ಣೆಯನ್ನು ಸೂಕ್ತರೀತಿಯಲ್ಲಿ ವಿತರಣೆ ಮಾಡಬೇಕೆಂದು ಒತ್ತಾಯಿಸಿದೆ.

ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೆ. ಕೃಷ್ಣಪ್ಪ ವಹಿಸಿದರು. ಆರಂಭದಲ್ಲಿ ಶ್ರೀ ಸಾಬ ಬ್ಯಾರಿ ಸ್ವಾಗತಿಸಿದರು. ಬೀಡಿ ಕೆಲಸಗಾರರ ಸಂಘದ ಮುಂದಾಳುಗಳಾದ ಶ್ರೀ ಬಿ. ವಾಸುಶೆಟ್ಟಿ ಮತ್ತು ಶ್ರೀ ಬಿ. ನಾರಾಯಣ ಮಾತನಾಡಿ ಬೀಡಿ ಕೆಲಸವನ್ನು ಕಡಿತ ಮಾಡಿರುವ ಮಾಲಿಕರು ಮಜೂರರಿಗೆ ಪರಿಹಾರವನ್ನು ಒದಗಿಸಲು ಮುಂದಾಗಬೇಕೆಂದು ಹೇಳಿ ಬೀಡಿ ಕಾರ್ಮಿಕರು ತಮ್ಮ ಸಂಘಟನೆಯನ್ನು ಬಲಪಡಿಸಬೇಕೆಂದು ಒತ್ತಾಯಿಸಿದರು. ಅನಂತರ ಗ್ರಾಮದ ಸಂಘಟನಾ ಸಮಿತಿಯನ್ನು ರಚಿಸಿ ಶ್ರೀ ಸಾಬ ಬ್ಯಾರಿಯವರನ್ನು ಅಧ್ಯಕ್ಷರಾಗಿಯೂ, ಶ್ರೀ ದೇವಪ್ಪ ಕಾರ್ಯದರ್ಶಿಯಾಗಿಯೂ, ಶ್ರೀ ಅಬ್ದುಲ್ ಕಾದರ್ ಜತೆಕಾರ್ಯದರ್ಶಿಯನ್ನಾಗಿಯೂ ಆರಿಸಿತು.

ಯಶವಂತಪುರ ವಿಭಾಗ ಕಾರ್ಮಿಕ ಸಂಘಗಳ ಸಭೆ

ದಿನಾಂಕ 27-1-80 ರಂದು ಬೆಂಗಳೂರು ನಗರ ಯಶವಂತಪುರ ವಿಭಾಗ ಕಾರ್ಮಿಕ ಸಂಘಗಳ ಸಭೆ ಸಿ. ಐ. ಟಿ. ಯು. ರಾಜ್ಯ ಘಟಕದ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಸೂರ್ಯನಾರಾಯಣರಾಯರು ಚರಿತ್ರಾರ್ಹ ಮೈಕೋ ಕಾರ್ಮಿಕರ ಹೋರಾಟದ ಹಿನ್ನೆಲೆಯನ್ನು ತಿಳಿಸುತ್ತಾ "ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ತಮ್ಮ ಹಕ್ಕುಗಳಿಗೋಸ್ಕರ ಹೋರಾಟ ನಡೆಸಿದವರು ಮೈಕೋ ಕಾರ್ಮಿಕರು. ದೋಷಪೂರಿತ ಸ್ಟ್ಯಾಂಡಿಂಗ್ ಆರ್ಡರ್ ವಿರುದ್ಧ ಹೆಚ್ಚುವರಿ ಕೆಲಸದ ವಿರುದ್ಧ ಹೋರಾಟದ ದಾರಿಯನ್ನು ಹಿಡಿದ ಅಪರಾಧಕ್ಕಾಗಿ 26 ಜನ ಸಹೋದ್ಯೋಗಿಗಳನ್ನು ಕೆಲಸದಿಂದ ಕಿತ್ತುಹಾಕಿದುದರ ವಿರುದ್ಧ 87 ದಿನಗಳ ಧೀರೋದಾತ್ತ ಹೋರಾಟ ನಡೆಸಿದರು. ಈ ಅವಧಿಯಲ್ಲಿ ಸಂಘದ ಕಾರ್ಯದರ್ಶಿಯವರ ಮೇಲೆ, ಅಧ್ಯಕ್ಷರ ಮೇಲೆ ಅಮಾನುಷ ಹಲ್ಲೆ ನಡೆಸಲಾಯಿತು. ಎಷ್ಟೇ ಪ್ರತಿಕೂಲಗಳಿದ್ದರೂ ಎದುರಿಸಿ ಕಾರ್ಮಿಕರು ಜಯಗಳಿಸಿದುದನ್ನು ವಿವರಿಸಿದರು.

ಮುಂದುವರಿಯುತ್ತಾ ಪ್ರಸಕ್ತ ಲೋಕಸಭಾಚುನಾವಣೆಗಳನ್ನು ಪ್ರಸ್ತಾಪಿಸಿ ಮತ್ತೆ ದೇಶದ ನೇತೃತ್ವ ಕಾರ್ಮಿಕ ವಿರೋಧಿ. ಜನವಿರೋಧಿ, ಸರ್ವಾಧಿಕಾರಿ ಇಂದಿರಾಳ ಕೈಯಲ್ಲಿ ಬಂದಿದ್ದು, ಈ ವಿಜಯಕ್ಕೆ ಜನತಾ ಪಕ್ಷದೊಳಗಿನ ಗೊಂದಲ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಅಶಕ್ತತೆ ಜನತೆಯ ರಾಜಕೀಯ ಪ್ರಜ್ಞೆಯ ಕೊರತೆ ಕಾರಣವೆಂದರು. ಆದರೆ ಎಡಪಕ್ಷಗಳು ಪ್ರಬಲವಿದ್ದ ಪ. ಬಂಗಾಳ, ತ್ರಿಪುರಾ ಮತ್ತು ಕೇರಳಗಳಲ್ಲಿ ಜನತೆ ಇಂದಿರಾಳನ್ನು ಧಿಕ್ಕರಿಸಿ ಎಡರಂಗವನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸಿರುವುದನ್ನು ಪ್ರಸ್ತಾಪಿಸಿ ಇಂದಿರಾಳಿಗೆ ತಕ್ಕ ಪರ್ಯಾಯವೇ

[ಕಡೆಯ ಪುಟನೋಡಿ]

ಲ್ಯಾಟಿನ್ ಅಮೇರಿಕಾ - ಸಾಮಾಜಿಕ, ರಾಜಕೀಯ ಬೆಳವಣಿಗೆಗಳು

ಲ್ಯಾಟಿನ್ ಅಮೇರಿಕಾ ಖಂಡದಲ್ಲಿ ಕೆಲವೊಂದು ವಿಶಿಷ್ಟ ವಿದ್ಯಮಾನಗಳು ಕಾಣಿಸಿಕೊಂಡಿವೆ. ಇವು ಕೆಲವೊಮ್ಮೆ ತೀರ ಕ್ಲಿಷ್ಟವಾಗಿಯೂ ವಿರೋಧಾಭಾಸಗಳಿಂದ ಕೂಡಿರುವಂತೆ ಕಂಡು ಬಂದರೂ ಈ ಖಂಡದಲ್ಲಿ ಕೆಲವು ನಿರ್ದಿಷ್ಟ ಪರಿವರ್ತನೆಗಳು ಪ್ರಾರಂಭಗೊಂಡಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ಮೊದಲನೆಯ.ದಾಗಿ ಇಂದು ವಿಶ್ವಾದ್ಯಂತ ಕಾಣಿಸಿಕೊಂಡಿರುವ ರಾಜಕೀಯ ಪರಿವರ್ತನೆಗಳು ಲ್ಯಾಟಿನ್ ಅಮೇರಿಕಾವನ್ನು ತಟ್ಟದಂತೆ ಮಾಡುವಲ್ಲಿ ಅಲ್ಲಿನ ಪ್ರತಿಗಾಮಿಗಳೂ ಸಾಮ್ರಾಜ್ಯವಾದಿ ಶಕ್ತಿಗಳೂ ವಿಫಲರಾಗಿದ್ದಾರೆ. ತೀರ ಇತ್ತೀಚೆಗಿನವರೆಗೆ ಲ್ಯಾಟಿನ್ ಅಮೇರಿಕಾದ ಅನೇಕ ದೇಶಗಳಲ್ಲಿನ ಮಿಲಿಟರಿ ಸರ್ವಾಧಿಕಾರಿ ಆಡಳಿತೆಗಳು ಸಾಕಷ್ಟು ಸ್ಥಿರವಾಗಿರುವಂತೆಯೂ ಬಹುರಾಷ್ಟ್ರೀಯ ಸಂಸ್ಥೆಗಳ ಹಾಗೂ ಸ್ಥಳೀಯ ಏಕಸ್ವಾಮ್ಯವಾದಿ ಬಂಡವಾಳಶಾಹಿಗಳ ಒಕ್ಕೂಟದ ಹಿತಾಸಕ್ತಿಯನ್ನು ದಕ್ಷತೆಯಿಂದ ಕಾಪಾಡಿಕೊಳ್ಳಲು ಸಮರ್ಥವಾಗಿರುವಂತೆಯೂ ಕಂಡುಬರುತ್ತಿದ್ದವು. ಪ್ರತಿಗಾಮಿ ಸೈನಿಕ ಸರ್ವಾಧಿಕಾರ ಮತ್ತು ತಾಂತ್ರಿಕಶಾಹಿ ಗುಂಪುಗಳೇ ಈ ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ಏಕಸ್ವಾಮ್ಯವಾದಿ ಬಂಡವಾಳಶಾಹಿಗಳ ಒಕ್ಕೂಟದ ಹಿಂದಿದ್ದ ಪ್ರಮುಖ ಬಲವಾಗಿದ್ದವು.

ಕಮ್ಯುನಿಸ್ಟ್ ದ್ವೇಷ:

ಇಂತಹ ಆಡಳಿತೆಗಳ ಬೆಂಬಲಿಗರು ತಮ್ಮ ಧೋರಣೆಗಳನ್ನು ವರ್ಗ ಮತ್ತು ಸಾಮಾಜಿಕ ಸಂಘರ್ಷಗಳ ನಿವಾರಣೆಮಾಡಬಲ್ಲ ಹಾಗೂ ಹಿಂದುಳಿದಿದ್ದ ತಮ್ಮ ಆರ್ಥಿಕ ವ್ಯವಸ್ಥೆಯನ್ನು 'ಕಾನೂನು' ಮತ್ತು 'ಸ್ಥಿರತೆ'ಗಳ ಮುಖಾಂತರವೇ ಆಧುನೀಕರಣಗೊಳಿಸಬಲ್ಲ ಸಿದ್ಧೌಷಧಗಳೆಂದು ತೋರ್ಪಡಿಸಿಕೊಳ್ಳುತ್ತಿದ್ದರು. ಶೀತಲ ಯುದ್ಧದ ಕಾಲದಲ್ಲಿ, ಅಮೇರಿಕಾದ ನೀತಿಯ ಪ್ರಭಾವಕ್ಕೊಳಪಟ್ಟಿದ್ದ ಅನೇಕ ರಾಷ್ಟ್ರಗಳಲ್ಲಿ ಅನುಷ್ಠಾನಕ್ಕೆ ತರಲಾಗಿದ್ದ "ರಾಷ್ಟ್ರೀಯ ಸುಭದ್ರತೆ"ಯ ಸಿದ್ಧಾಂತವನ್ನು ಈ ಆಡಳಿತೆಗಳು ಬಲವಾಗಿ ನೆಚ್ಚಿಕೊಂಡಿದ್ದವು. ಕಮ್ಯುನಿಸಂಗೆ ನಿರ್ದಾಕ್ಷಿಣ್ಯವಾದ ವಿರೋಧ ವ್ಯಕ್ತಪಡಿಸುವುದೇ ಈ ಸಿದ್ಧಾಂತದ ಒಳ ತಿರುಳು.

ಈ ಸಿದ್ಧಾಂತವನ್ನು ಪ್ರತಿಕ್ರಾಂತಿವಾದಿಗಳಿಗೆ ತಮ್ಮ ಎರಡು ಪ್ರಮುಖ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಅನುಕೂಲವಾಗುವಂತೆ ನಿರೂಪಿಸಲಾಗಿತ್ತು. ಪುರೋಗಾಮಿಶಕ್ತಿಗಳನ್ನು ಸೋಲಿಸುವುದು ಮತ್ತು ವಿಮೋಚನಾ ಚಳುವಳಿಗೆ ತಡೆಯೊಡ್ಡುವುದು ಮೊದಲನೆಯ ಉದ್ದೇಶ. ಕಾರ್ಮಿಕ ವರ್ಗವನ್ನು ಕ್ರೂರ ಶೋಷಣೆಗೆ ಒಳಪಡಿಸಿ, ಅವರ ಸಾಮಾಜಿಕ ಗಳಿಕೆಯನ್ನು ನಿಕೃಷ್ಟಗೊಳಿಸುವ ಮೂಲಕ ಬಂಡವಾಳಶಾಹಿ ಆಧುನೀಕರಣದ ದಾರಿಯನ್ನು ಸುಗಮಗೊಳಿಸುವುದು ಎರಡನೆಯದು. ಈ ಧೋರಣೆಯ ಸಫಲತೆಗೆ ಬ್ರೆಝಿಲ್‌ನ ಆರ್ಥಿಕಾಭಿವೃದ್ಧಿಯ ಪ್ರಮಾಣವನ್ನು (ಇದನ್ನು ಬ್ರೆಝಿಲಿಯನ್ ಪವಾಡವೆನ್ನಲಾಗಿದೆ) ದೃಷ್ಟಾಂತವಾಗಿ ತೋರಿಸಿ ಅದನ್ನು ಸಾಧ್ಯವಾದಷ್ಟು ಜಾಹೀರಾತು ಮಾಡಲಾಯಿತು. ಹೀಗೆಯೇ ಚಿಲಿಯ ಸೈನಿಕ ಫ್ಯಾಸಿಸ್ಟ್ ಸರ್ವಾಧಿಕಾರದ ಬೆಂಬಲಿಗರೂ ಉತ್ತರ ಅಮೇರಿಕಾದ ಪರಿಣತರಿಂದ ಸಿದ್ಧಪಡಿಸಲ್ಪಟ್ಟ ತಮ್ಮ ಆರ್ಥಿಕಾಭಿವೃದ್ಧಿಯ 'ಮಾದರಿ'ಯನ್ನೂ ಮೆರೆಯಿಸುತ್ತಿದ್ದಾರೆ. ಇತ್ತೀಚೆಗೆ ಪಿನೋಚೆಯ (ಚಿಲಿಯ ಮಿಲಿಟರಿ ಸರ್ವಾಧಿಕಾರಿ– ಅನು:)ರಹಸ್ಯ ಪೋಲೀಸ್ ದಳದವರಿಂದ ಹತ್ಯೆಮಾಡಲ್ಪಟ್ಟ ಓರ್ಲಾಂಡೋ ಲೆಟೆಲಿಯರ್ ತನ್ನ ಸಾವಿಗೆ ಕೆಲವೇ ದಿನಗಳ ಮೊದಲು ಈ ರೀತಿ ಬರೆದಿದ್ದಾರೆ. "ಮೂಲ ಉತ್ಪಾದನಾ ಸಾಧನಗಳನ್ನು ಕಾರ್ಮಿಕವರ್ಗ ಮತ್ತು ಮಧ್ಯಮ ವರ್ಗದ ಕೈಯ್ಯಿಂದ ಕಿತ್ತುಕೊಂಡು ಅದನ್ನು ಗುತ್ತೇದಾರಿಗಳು ಮತ್ತು ಆರ್ಥಿಕ ಸಟ್ಟಾವ್ಯಾಪಾರಿಗಳಂತಹ ಸ್ಥಿತಿವಂತ ವರ್ಗಗಳಿಗೆ ಹಸ್ತಾಂತರಿಸುವ ಮೂಲಕ ಈ ವಾದದ ಪ್ರತಿಪಾದಕರು ಈ ಅಲ್ಪಸಂಖ್ಯಾತ ವರ್ಗವು ಹೊಂದಿರುವ ರಾಜಕೀಯ, ಆರ್ಥಿಕ ಹತೋಟಿಯನ್ನು ಸುಸ್ಥಿರಗೊಳಿಸಲು ಪ್ರಯತ್ನಿಸಿದರು.

ತೀವ್ರತಮ ವೈರುಧ್ಯಗಳು:

ಇಂತಹ ಬಂಡವಾಳಶಾಹಿಯ ಆಧುನೀಕರಣ ಕ್ರಮಗಳು ಹಲವು ವೈರುಧ್ಯಗಳಿಗೆ ಎಡೆಮಾಡಿಕೊಟ್ಟಿವೆ ಮತ್ತು ಇವು ಸರ್ವಾಧಿಕಾರಿ ಆಡಳಿತೆಯನ್ನು ಅಲ್ಲೋಲಕಲ್ಲೋಲಗೊಳಿಸುತ್ತಿವೆ. "ಹತ್ತು ವರ್ಷಗಳ ಕಾಲದ ಜನವಿರೋಧಿ ಸರ್ವಾಧಿಕಾರಿ ಆಡಳಿತೆಯ ನಂತರ ಮುಖ್ಯವಾಗಿ ಬ್ರೆಝಿಲ್‌ನಂತಹ ಅನೇಕ ರಾಷ್ಟ್ರಗಳಲ್ಲಿ ಇಂತಹ ಆಳ್ವಿಕೆಗಳು ಸಂಪೂರ್ಣ ಪಶುತ್ವದ ಮಟ್ಟಕ್ಕಿಳಿದಿರುವುದು ಕಂಡುಬರುತ್ತಿದೆ. ಲ್ಯಾಟಿನ್ ಅಮೇರಿಕಾದ ಸೈನಿಕ ಮತ್ತು ಸರ್ವಾಧಿಕಾರಿ ಆಡಳಿತೆಗಳು ತೀವ್ರವಾದ ಬಿಕ್ಕಟ್ಟನ್ನು ಎದುರಿಸುತ್ತಿರುವುದು ಈ ಕಾಲಘಟ್ಟದಲ್ಲಿ ಸಾರ್ವತ್ರಿಕವಾಗುತ್ತಿದೆ" ಎಂದು ಬ್ರೆಝಿಲ್‌ನ ಸಮಾಜಶಾಸ್ತ್ರಜ್ಞ ಜೋಸ್ ಅಲ್ವಾರೋ ಮೊಯಿಸೆಸ್ ಹೇಳಿದ್ದಾರೆ.

"ರಾಷ್ಟ್ರೀಯ ಸುಭದ್ರತೆ"ಯ ಸಿದ್ಧಾಂತವನ್ನೂ ಅದರ ದಮನಕಾರಿ ಉದ್ದೇಶವನ್ನೂ ಈಗೀಗ ಲ್ಯಾಟಿನ್ ಅಮೇರಿಕಾದಲ್ಲಿನ ಸ್ವಾಮ್ಯವರ್ಗದ ವಿವಿಧ ವಿಭಾಗಗಳೇ ಟೀಕಿಸಲಾರಂಭಿಸಿರುವುದು ಕೇವಲ ಆಕಸ್ಮಿಕವಲ್ಲ. ಪ್ರತಿಕ್ರಾಂತಿವಾದಿ ಪಿತೂರಿಗಳು ನಡೆದಾಗಲೆಲ್ಲ ಅವಕ್ಕೆ ಬೆಂಬಲ ನೀಡಿದ ಮತ್ತು ಸರ್ವಾಧಿಕಾರಿ ಆಡಳಿತೆಯ ಅವಧಿಯಲ್ಲಿ ತಮ್ಮ ಸ್ಥಿತಿಯನ್ನು ಸುಭದ್ರವಾಗಿ ನೆಲೆಗೊಳಿಸಿಕೊಂಡ ಇಂತಹ ಅನೇಕ ಗುಂಪುಗಳು ಇದೀಗ ದುಡಿಯುವ ವರ್ಗದ ಕಡೆಗೆ ಹೆಚ್ಚು ದಾಕ್ಷಿಣ್ಯಪರ ವರ್ತನೆ ತೋರಿಸಬೇಕೆಂದೂ ಹೇಳಲಾರಂಭಿಸಿವೆ. ಮುಚ್ಚುಮರೆಯಿಲ್ಲದ ದಮನನೀತಿಯನ್ನೂ ಜನವಿರೋಧಿ ಧೋರಣೆಗಳನ್ನೂ ಮುಂದುವರಿಸಿದರೆ ಅದು ದುಡಿಯುವ ಜನತೆಯ ಹೋರಾಟವನ್ನು ತೀವ್ರಗೊಳಿಸೀತೆಂದೂ ಆಳುವ ವರ್ಗಗಳ ಪಾಲಿಗೆ ಅನಪೇಕ್ಷಿತ ಪರಿಣಾಮಗಳಿಗೆ ಕಾರಣವಾದೀತೆಂದೂ ಈ ವಿಭಾಗಗಳು ಭಯ ವ್ಯಕ್ತಪಡಿಸುತ್ತಿವೆ. ಇದರೊಂದಿಗೆ ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ದೇಶೀಯ ಹಿರಿಯ ಬಂಡವಾಳಶಾಹಿಗಳ ಗುಂಪುಗಳೊಂದಿಗೆ 'ಮುಕ್ತ ಸ್ಪರ್ಧೆ'ಗಿಳಿದು, ಸೋತು ಹಣ್ಣಾಗಿರುವ ಪುಟ್ಟ ಮತ್ತು ಮಧ್ಯಮ ತರಗತಿಯ ಬಂಡವಾಳಶಾಹಿಗಳೂ ದುಡಿಯುವ ವರ್ಗದೊಳಗಿನ ಬೇರೆ ಬೇರೆ ವಿಭಾಗಗಳ ಬೆಂಬಲವನ್ನು ಗಳಿಸಲು ಪ್ರಯತ್ನಿಸುತ್ತಿವೆ ಮಾತ್ರವಲ್ಲ, ಟ್ರೇಡ್‌ಯೂನಿಯನ್‌ಗಳೊಂದಿಗೂ ಸಂಪರ್ಕ ಬೆಳೆಸುತ್ತಿವೆ. 'ಬ್ರೆಝಿಲಿಯನ್ ಪವಾಡ' ದಪ್ರಯೋಜನ ತಟ್ಟದಿರುವ ಜನತೆ ಇದೀಗ ಪ್ರಾರಂಭಿಸಿರುವ ಪ್ರತಿಧಾಳಿಯನ್ನು ಬ್ರೆಝಿಲ್ ಎದುರಿಸುತ್ತಿದೆಯೆಂದೂ ಸ್ಥಳೀಯ ಹಿತಾಸಕ್ತಿಗಳ ಗುಂಪನ್ನು ಪ್ರತಿನಿಧಿಸುವ ಪತ್ರಿಕೆ 'ಬನಾಸ್' ವರದಿ ಮಾಡಿದೆ. ಕಾರ್ಮಿಕರ ಬಗೆಗಿನ ತನ್ನ ನಿಷ್ಠುರ ನೀತಿಯನ್ನು ಕೈಬಿಟ್ಟು ಅವರೊಂದಿಗೆ ಸಮಾಲೋಚನೆ ನಡೆಸಬೇಕೆಂದೂ, ವಿವಿಧ ಸಾಮಾಜಿಕ ಶಕ್ತಿಗಳೊಡನೆ ಚರ್ಚೆಗೆ ಮುಂದಾಗಬೇಕೆಂದೂ ಈ ಪತ್ರಿಕೆ ಬ್ರೆಝಿಲ್ ಸರಕಾರಕ್ಕೆ ಕರೆ ನೀಡಿದೆ.

ವಿವಿಧೆಡೆಗಳಿಂದ ಟೀಕೆ:

ಬೇರೆಬೇರೆ ವಾಣಿಜ್ಯ ಸಂಸ್ಥೆಗಳು ಅದರಲ್ಲೂ ಮುಖ್ಯವಾಗಿ ಅಸೋಸಿಯೇಶನ್ ಆಫ್ ಅಯರ್ನ್ ಎಂಡ್ ಸ್ಟೀಲ್ ಇಂಡಸ್ಟ್ರೀಸ್ ಮತ್ತು ಅಸೋಸಿಯೇಶನ್ ಆಫ್ ಕ್ರಿಶ್ಚಿಯನ್ ಬಿಸಿನೆಸ್‌ಮನ್-ಇವು ಚಿಲಿ ಆಡಳಿತೆಯ ಕಾರ್ಮಿಕ ವಿರೋಧಿ ನೀತಿಯನ್ನು ಟೀಕಿಸಲಾರಂಭಿಸಿವೆ. ಸಾಮೂಹಿಕ ಚೌಕಾಶಿಯ ಹಕ್ಕನ್ನು ಮರಳಿ ಸ್ಥಾಪಿಸಬೇಕೆಂದೂ, ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕೆಂದೂ ಅವು ಹೇಳಲಾರಂಭಿಸಿವೆ.

'ರಾಷ್ಟ್ರೀಯ ಸುಭದ್ರತೆ'ಯ ಈ ನೀತಿ ಪ್ರಭಾವಶಾಲಿ ಕ್ಯಾಥೋಲಿಕ್ ವರ್ತುಲಗಳಲ್ಲೂ ಟೀಕೆಗೊಳಗಾಗುತ್ತಿದೆ. ಚರ್ಚಿನ ಅನುಯಾಯಿಗಳಲ್ಲಿ ದುಡಿಯುವ ವರ್ಗಕ್ಕೆ ಸೇರಿದವರ ನಡುವೆ ಅವರ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಅಸಂತೃಪ್ತಿ ಹೆಚ್ಚುತ್ತಿರುವ ಬಗ್ಗೆ ಚರ್ಚಿನ ಮುಂದಾಳುಗಳು ತಮ್ಮ ಹೇಳಿಕೆಗಳಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಮುಂದೊಂದುದಿನ ಭೀಕರ ಸಾಮಾಜಿಕ ವಿಸ್ಫೋಟನೆಗೆ ಅವಕಾಶ ಮಾಡಿಕೊಡಬಹುದಾದಂತಹ ಪರಿಸ್ಥಿತಿಯೊಂದು ಈಗ ಪಕ್ವವಾಗುತ್ತಿದೆಯೆಂದೂ ಮತ್ತು ಅದನ್ನು ತಡೆಗಟ್ಟಲು ಅವರು ಆತುರರಾಗಿದ್ದಾರೆಂದೂ ಇದರಿಂದ ಕಂಡುಬರುತ್ತಿದೆ. 1979ರ ಜನವರಿ, ಫೆಬ್ರವರಿಯಲ್ಲಿ ನಡೆದ ಲ್ಯಾಟಿನ್ ಅಮೇರಿಕನ್ ಬಿಷಪ್‌ಗಳ ಮೂರನೇ ಸಮ್ಮೇಳನದ ವರದಿಯಲ್ಲಿ ಹೀಗೆ ಹೇಳಲಾಗಿದೆ. "ತೀವ್ರಗತಿಯ ಆರ್ಥಿಕ ಅಭಿವೃದ್ಧಿಯ ಹೆಸರಿನಲ್ಲಿ ಬಹುಸಂಖ್ಯಾತ ಜನರ ತುರ್ತು ಅವಶ್ಯಕತೆಗಳನ್ನು ಕಡೆಗಣಿಸಿಬಿಡಲಾಗಿದೆ; ಜನ ತಮ್ಮಷ್ಟಕ್ಕೆ ತಾವೇ ಎಂದೂ ಅಂಗೀಕರಿಸಲಾರದಂತಹ ನೀತಿಯೊಂದನ್ನು ಅವರ ಮೇಲೆ ಹೇರುವ ಸಲುವಾಗಿ ನಿರಂಕುಶಾಧಿಕಾರಿ ಆಡಳಿತೆಗಳ ಅಸ್ತಿತ್ವವೂ ಅಗತ್ಯವಾಗಿಬಿಟ್ಟಿದೆ."

'ರಾಷ್ಟ್ರೀಯ ಸುಭದ್ರತೆ' ಯ ನೀತಿಯ ಅನುಷ್ಠಾನಕ್ಕಾಗಿ ಪ್ರತಿಗಾಮಿಗಳು ಯಾವ ಸಶಸ್ತ್ರ ಪಡೆಗಳ ಮೇಲೆ ಅವಲಂಬಿಸಿಕೊಂಡಿದ್ದಾರೋ ಅಂತಹ ಸೈನಿಕ ಪಡೆಗಳ ನಡುವೆಯೂ ಈ ನೀತಿ ಟೀಕೆಗೊಳಗಾಗುತ್ತಿದೆ. ಈ ದೃಷ್ಟಿಯಿಂದ ಬೊಲಿವಿಯದಲ್ಲಿ ಈಚೆಗೆ ನಡೆದ ವಿದ್ಯಮಾನಗಳು ಗಮನಾರ್ಹವೆನಿಸಿದೆ. ಇಲ್ಲಿ 1978ರ ನವೆಂಬರ್‌ನಲ್ಲಿ ಜನರಲ್ ಪಡಿಲ್ಲಾ ಅವರ ನೇತೃತ್ವದ ಸೈನಿಕ ಸರಕಾರ ಸ್ಥಾಪನೆಯಾಗಿತ್ತು. ಈಗ ಜನರಲ್ ಪಡಿಲ್ಲಾ ತನ್ನ ದೇಶದಲ್ಲಿ ಪ್ರಜಾಸತ್ತೆಯನ್ನು ನೆಲೆಗೊಳಿಸುವುದಾಗಿ ಘೋಷಿಸಿಕೊಂಡಿದ್ದಾರೆ. 1979ರ ಬೇಸಿಗೆಯಲ್ಲಿ ಚುನಾವಣೆಯೂ ನಡೆದಿದೆ ಮತ್ತು ಇದರಲ್ಲಿ ಪುರೋಗಾಮಿ ಶಕ್ತಿಗಳಿಗೂ ಪಾಲುಗೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಇದು ಸೈನಿಕ ಹಾಗೂ ಸರ್ವಾಧಿಕಾರಿ ವರ್ತುಲಗಳಲ್ಲೂ ಉಂಟಾಗುತ್ತಿರುವ ಪರಿವರ್ತನೆಗೆ ಒಂದು ದೃಷ್ಟಾಂತ ಮಾತ್ರವಲ್ಲ; ಸೈನ್ಯ ಮತ್ತು ಜನತೆಯ ನಡುವೆ ಸಂಧಾನವುಂಟಾಗುವ ಸಾಧ್ಯತೆಗಳನ್ನೂ ಅದು ತೋರಿಸಿಕೊಟ್ಟಿದೆ.

ಸಶಸ್ತ್ರ ಪಡೆಗಳು ಮತ್ತು ಜನತೆ:

ಇಂತಹ ಸಂಧಾನಕ್ಕಾಗಿ ಪ್ರಯತ್ನ ನಡೆಸುತ್ತಿರುವ ಎಡಶಕ್ತಿಗಳು 'ರಾಷ್ಟ್ರೀಯ ಸುಭದ್ರತೆ'ಯ ಸೂತ್ರವನ್ನು ಸಾಮ್ರಾಜ್ಯಶಾಹಿ ವಿರೋಧಿ ಮತ್ತು ದೇಶಪ್ರೇಮಿ ಮನೋಭಾವದ ಧೋರಣೆಯೆಂಬುದಾಗಿ ವರ್ಣಿಸುತ್ತಾರೆ. ಸಶಸ್ತ್ರ ದಳಗಳು ಮತ್ತು ಜನತೆಯ ನಡುವಣ ಸಹಯೋಗವನ್ನು ಬಲಪಡಿಸಿಕೊಂಡರೆ ಮಾತ್ರ ರಾಷ್ಟ್ರೀಯ ಸಾರ್ವಭೌಮತ್ವವನ್ನು ಕಾಪಾಡಿಕೊಳ್ಳಲೂ, ರಕ್ಷಣಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲೂ ಸಾಧ್ಯವೆಂದು ಬೊಲಿವಿಯಾದ ಕಮ್ಯುನಿಸ್ಟರು ಒತ್ತಿ ಹೇಳುತ್ತಿದ್ದಾರೆ. ಪುರೋಗಾಮಿ ಶಕ್ತಿಗಳ ಒಗ್ಗಟ್ಟು ಮತ್ತು ಸೈನ್ಯವನ್ನು ತಮ್ಮೆಡೆಗೆ ಸೆಳೆದುಕೊಳ್ಳಬಲ್ಲಂಥ ರಾಷ್ಟ್ರೀಯ ಅಭಿವೃದ್ಧಿಯ ಬದಲಿ ಕಾರ್ಯಕ್ರಮವೊಂದನ್ನು ಮುಂದಿರಿಸಬಲ್ಲ ಅವರ ಸಾಮರ್ಥ್ಯ–ಇವೆರಡರ ಮೇಲೆಯೇ ಹೆಚ್ಚಾಗಿ ಸೈನ್ಯದ ಬೆಂಬಲ ಗಳಿಸುವ ಅವರ ಪ್ರಯತ್ನದ ಯಶಸ್ಸು ಆಧರಿಸಿದೆ. ಚಿಲಿಯ ಕಮ್ಯುನಿಸ್ಟ್ ಮುಖಂಡ ಲೂಯಿಸ್ ಕೊರವಲನ್ ಹೇಳುವಂತೆ, "ಒಂದು ರಾಷ್ಟ್ರಕ್ಕೆ ತನ್ನದೇ ಆದ ರಾಷ್ಟ್ರೀಯ ಸಂಪನ್ಮೂಲಗಳಿರಬೇಕು ಮತ್ತು ಅವು ಅದರದ್ದೇ ನಿಯಂತ್ರಣಕ್ಕೆ ಹಾಗೂ ಸಂರಕ್ಷಣೆಗೆ ಒಳಪಡಬೇಕು. ರಾಷ್ಟ್ರದ ಆರ್ಥಿಕ ವಿಕಸನ, ಜನತೆಯ ಸ್ವಾತಂತ್ರ್ಯ ಮತ್ತು ಅವರ ಜೀವನಮಟ್ಟದ ಸುಧಾರಣೆ ಇವು ಖಚಿತವಾಗಬೇಕು. ರಾಷ್ಟ್ರೀಯ ಸುಭದ್ರತೆಯ ಸೂತ್ರವನ್ನು ಈ ಶರ್ತಗಳ ಮೇಲೆ ಮಾತ್ರ ಅಂಗೀಕರಿಸಲು ಸಾಧ್ಯ ಎಂದಿದ್ದಾರೆ.

ಹೋರಾಟದ ಹೆದ್ದೆರೆಗಳು:

ಸರ್ವಾಧಿಕಾರಿ ಆಡಳಿತಗಳು ದುರ್ಬಲವಾಗುತ್ತಿರುವುದಕ್ಕೆ ದುಡಿಯುವ ಜನತೆ ನಡೆಸುತ್ತಿರುವ ಬೃಹತ್ ಹೋರಾಟಗಳೇ ಮುಖ್ಯ ಕಾರಣ. ಇತ್ತೀಚೆಗೆ ಈ ಹೋರಾಟಗಳು ಹೊಸಹೊಸ ರೂಪಗಳನ್ನು ಗಳಿಸಿಕೊಂಡಿವೆ. ಪ್ರಜಾಸತ್ತಾತ್ಮಕ ಮತ್ತು ರಾಷ್ಟ್ರವ್ಯಾಪಿ ಅವಶ್ಯಕತೆಗಳೇ ಈ ಹೋರಾಟದಲ್ಲಿ ಮುಖ್ಯ ಪ್ರಶ್ನೆಗಳಾಗುತ್ತಿವೆ. ಉದಾಹರಣೆಗೆ ಬೊಲಿವಿಯಾದಲ್ಲಿ ಗನಿಕಾರ್ಮಿಕರು ಮತ್ತು ಇತರ ವಿಭಾಗದ ಕಾರ್ಮಿಕ ವರ್ಗ ಪ್ರಜಾಸತ್ತೆಗಾಗಿ ಹಾಗೂ ಪುರೋಗಾಮಿ ಮತ್ತು ದೇಶಪ್ರೇಮಿ ಶಕ್ತಿಗಳ ವಿಸ್ತೃತ ಐಕ್ಯರಂಗದ ರಚನೆಗಾಗಿ ನಡೆಸಿದ ಸತತ ಹೋರಾಟವು ಆ ದೇಶವನ್ನು ಪ್ರಜಾಪ್ರಭುತ್ವದೆಡೆಗೆ ಕೊಂಡೊಯ್ಯುವಲ್ಲಿ ಮಹತ್ವದ ಪಾತ್ರ ವಹಿಸಿದೆ ಮತ್ತು ಸೈನ್ಯದೊಳಗೂ ಅಪೇಕ್ಷಿತ ಬದಲಾವಣೆಗಳಿಗೆ ಎಡೆಮಾಡಿಕೊಡುತ್ತಿದೆ.

ಬ್ರೆಝಿಲ್‌ನಲ್ಲಿ ದುಡಿಯುವ ವರ್ಗದ ಬೇರೆ ಬೇರೆ ವಿಭಾಗಗಳು ಅದರಲ್ಲೂ ತಮ್ಮ ಹಕ್ಕುಗಳಿಗಾಗಿ ನಿರಂತರ ಹೋರಾಡಿದ ಉಕ್ಕಿನ ಕಾರ್ಮಿಕರು-ನಡೆಸಿದ ತೀವ್ರ ಹೋರಾಟಗಳು ವಿವಿಧ ಸಾಮಾಜಿಕ ಶಕ್ತಿಗಳ ನಿಲುವುಗಳ ಮೇಲೆ ಪ್ರಭಾವ ಬೀರುವಲ್ಲಿ ಕಾರ್ಮಿಕ ವರ್ಗಕ್ಕಿರುವ ಸಾಮರ್ಥ್ಯವನ್ನು ತೋರಿಸಿಕೊಟ್ಟಿವೆ.

ಚಿಲಿಯ ದುಡಿಯುವ ವರ್ಗ ನಡೆಸಿದ ಹೋರಾಟಗಳು ತೀವ್ರವಾಗುತ್ತಿರುವುದಕ್ಕೆ ಕಾರಣಗಳನ್ನು ಕೊಡುತ್ತಾ

"ರೆಸಿಸ್ಟೆನ್ಸಿಯಾ ಚಿಲೆನಾ' ಪತ್ರಿಕೆ, "ಏಕಸ್ವಾಮ್ಯವಾದಿಗಳ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಹಿತದೃಷ್ಟಿಯಿಂದ ಸರಕಾರ ಅನುಸರಿಸಿದ ನೀತಿ ಕಾರ್ಮಿಕ ವರ್ಗಕ್ಕೆ ಚಿಲಿಯ ಸರಕಾರದ ವರ್ಗಸ್ವರೂಪವನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ" ಎಂದಿದೆ. ಏಪ್ರಿಲ್ 1977ರಲ್ಲಿ 126 ಕಾರ್ಮಿಕ ಸಂಘಟನೆಗಳ ಮುಂದಾಳುಗಳು ಫ್ಯಾಸಿಸ್ಟ್ ಆಡಳಿತೆಯ ಮುಖಂಡನಿಗೆ ನೀಡಿದ ಹೇಳಿಕೆಯೊಂದರಲ್ಲಿ ಪ್ರಜಾತಾಂತ್ರೀಕರಣ ಮತ್ತು ಸಮಾಜ ಜೀವನದ ಪುನರುತ್ಥಾನಕ್ಕಾಗಿ ಆಪರಿಸಿರುವ ಪ್ರಬಲ ಇಚ್ಛೆ ವ್ಯಕ್ತವಾಗಿದೆ. "ಸಂಘಟಿತ ಕಾರ್ಮಿಕ ವರ್ಗದ ರಚನಾತ್ಮಕ ಸಾಮರ್ಥ್ಯದ ಮೇಲೆ ಆಧರಿಸಿಕೊಂಡಿರುವ ಪ್ರಜಾಸತ್ತಾತ್ಮಕ ವ್ಯವಸ್ಥೆಯ ನಿರ್ಮಾಣವೇ ಕಾರ್ಮಿಕ ವರ್ಗದ ಚಳುವಳಿಯ ಕರ್ತವ್ಯವಾಗಿತ್ತು; ಈಗಲೂ, ಇನ್ನು ಮುಂದೆಯೂ ಇದೇ ಅದರ ಕರ್ತವ್ಯವಾಗಿರುತ್ತದೆ. ಇಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಅಧಿಕಾರ, ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಸಂಸ್ಕೃತಿ- ಇವು ಬಹುಸಂಖ್ಯಾತ ಜನರ ಅಂಕೆಯಲ್ಲಿರುತ್ತವೆ." ಎಂಬುದಾಗಿ ಇದರಲ್ಲಿ ಘೋಷಿಸಲಾಗಿದೆ. ದಮನಕಾರಿ ಕೃತ್ಯಗಳು ಮತ್ತು ಬೆದರಿಕೆಗಳ ನಡುವೆಯೂ ಚಿಲಿಯ ದುಡಿಯುವ ವರ್ಗ ಇನ್ನಷ್ಟು ಸುಸಂಘಟಿತವಾಗುತ್ತಿದೆ; ಹೆಚ್ಚು ಒಗ್ಗಟ್ಟಾಗುತ್ತಿದೆ. ಮೇ 1, 1979 ರಂದು ದಮನವನ್ನು ವಿರೋಧಿಸಿ ನಾಗರಿಕ ಹಕ್ಕು ಮತ್ತು ಸ್ವಾತಂತ್ರ್ಯಗಳ ಮರಳಿಕೆಯನ್ನು ಒತ್ತಾಯಿಸಿ ಸಹಸ್ರಾರು ಜನ ಚಿಲಿಯನ್ ಕಾರ್ಮಿಕರು ಪ್ರದರ್ಶನದಲ್ಲಿ ಪಾಲ್ಗೊಂಡರು.

ಫ್ಯಾಸಿಸ್ಟ್ ಆಡಳಿತೆಯ ಕುಹಕ :

ದುಡಿಯುವ ವರ್ಗ ಮತ್ತಿತರ ಪುರೋಗಾಮಿ ಶಕ್ತಿಗಳು ತಮ್ಮ ಹೋರಾಟವನ್ನು ತೀವ್ರಗೊಳಿಸುತ್ತಿರುವಂತೆಯೇ ಸೈನಿಕ ಫ್ಯಾಸಿಸ್ಟ್ ಆಡಳಿತೆಯೂ ಉದಾರವಾದಿ ಧೋರಣೆಯನ್ನು (ಸಾಮೂಹಿಕ ಚೌಕಾಶಿ ಹಕ್ಕಿನ ಭಾಗಶಃ ಪುನಃಸ್ಥಾಪನೆ ಮತ್ತು ಕೆಲವು ಸಂದರ್ಭಗಳಲ್ಲಿ ಮಾತ್ರ ಮುಷ್ಕರ ಮಾಡುವ ಹಕ್ಕು-ಇತ್ಯಾದಿ) ತಾನು ಅನುಸರಿಸುತಿದ್ದೇನೆಂದು ಘೋಷಿಸಿಕೊಳ್ಳುವ ಮೂಲಕ ಅವರನ್ನು ವಂಚಿಸಲು ಹವಣಿಸುತ್ತಿದೆ. ಅತಿ ಪ್ರಚಾರಕ್ಕೊಳಗಾದ ಚಿಲಿಯ ಈ 'ಉದಾರವಾದಿತನ'ದ ಮೂಲತಿರುಳು ಏನೆಂಬುದು 1978ರ ಅಂತ್ಯದಲ್ಲಿ ಪ್ರಕಟಿಸಲ್ಪಟ್ಟ ಕರಡು ಸಂವಿಧಾನದಿಂದ ಗೊತ್ತಾಗುತ್ತಿದೆ. ಈ ಸಂವಿಧಾನದ ಲೇಖಕರು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಧ್ವಂಸಕ ಸಿದ್ಧಾಂತಗಳ ಆರೋಪಿತ ಪ್ರಚಾರ ನಡೆಯಲು ಅವಕಾಶವಿತ್ತಿರುವುದಕ್ಕಾಗಿ ಅಂತಹ ರಾಷ್ಟ್ರಗಳನ್ನು ಟೀಕಿಸಿದ್ದಾರೆ. 'ಸರ್ವಾಧಿಕಾರಿ ಸಂಘಟನೆಗಳಿಗ'-ಅಂದರೆ ಕಮ್ಯುನಿಸ್ಟ್ ಮತ್ತಿತರ ಎಡ ಪಕ್ಷಗಳಿಗೆ, ಟ್ರೇಡ್ ಯೂನಿಯನ್ ಮತ್ತು ಪ್ರಜಾಸತ್ತಾತ್ಮಕ ಸಾಮುದಾಯಿಕ ಸಂಘಟನೆಗಳ ಪ್ರಚಾರಕ್ಕೂ ಅವಕಾಶ ನೀಡಿರುವುದಕ್ಕಾಗಿ ಪಾಶ್ಚಾತ್ಯ ರಾಷ್ಟ್ರಗಳನ್ನು ಎಚ್ಚರಿಸಲಾಗಿದೆ. ಪುರೋಗಾಮಿ ವಾಮಪಂಥೀಯ ಪಕ್ಷಗಳನ್ನೂ, ಚಳುವಳಿಗಳನ್ನೂ 'ಭಯೋತ್ಪಾದಕ ಕೃತ್ಯ'ಗಳೆಂದು ಪರಿಗಣಿಸಲಾಗಿದೆ ಮತ್ತು ಅವುಗಳನ್ನು ಕ್ರೂರವಾಗಿ ಹತ್ತಿಕ್ಕಬೇಕೆಂದೂ ಹೇಳಲಾಗಿದೆ. ಖಾಸಗಿ ಒಡೆತನದ ಸಿದ್ಧಾಂತದ ಮೇಲೆ ನಿರ್ಮಿತವಾದ ಸರ್ವಾಧಿಕಾರಿ, ದಮನಕಾರಿ 'ಮಾದರಿ' ವ್ಯವಸ್ಥೆಯನ್ನು ವಿರೋಧಿಸುವ ಯಾವುದೇ ವಿಚಾರ ಅಥವಾ ಸಿದ್ಧಾಂತದ ಪ್ರಚಾರವನ್ನು ಸಂವಿಧಾನ ವಿರೋಧಿಯೆಂದೂ ಹಿಂಸಾ ಪ್ರಚೋದಕವೆಂದೂ ವರ್ಣಿಸಲಾಗುತ್ತಿರುವುದರಲ್ಲಿ ಆಶ್ಚರ್ಯವಿಲ್ಲ.

ಉರುಗ್ವೆಯಲ್ಲೂ ಕಮ್ಯುನಿಸ್ಟರು, ಇತರ ಪಕ್ಷಗಳ ಪ್ರತಿನಿಧಿಗಳು ಟ್ರೇಡ್ ಯೂನಿಯನ್ ಕಾರ್ಯಕರ್ತರು ಮತ್ತು ಪ್ರಗತಿಶೀಲ ಮನೋಭಾವದ ಸರಕಾರಿ ನೌಕರರ ಮೇಲೆ ದಬ್ಬಾಳಿಕೆ ಅವ್ಯಾಹತವಾಗಿ ನಡೆದಿದೆ. ಬ್ರೆಝಿಲ್‌ನಲ್ಲಿ ಪ್ರಜಾಸತ್ತೆಯ ಸ್ಥಾಪನೆಗಾಗಿ ಹೋರಾಡುತ್ತಿರುವವರ ಮೇಲೆ ಪ್ರತಿಗಾಮಿ ಭಯೋತ್ಪಾದಕ ಶಕ್ತಿಗಳು ಬೆದರಿಕೆಯೊಡ್ಡುತ್ತಿವೆ. ಈ ದೇಶದ ಬಲಪಂಥೀಯ ಭಯೋತ್ಪಾದಕ ಸಂಘಟನೆಗಳೂ ತಮ್ಮ ಚಟುವಟಿಕೆಯನ್ನು ತೀವ್ರಗೊಳಿಸಿವೆ. 1978ರ ಅಂತ್ಯದಲ್ಲಿ ಇಂತಹ ಒಂದು ಸಂಘಟನೆ-ಕಮ್ಯಾಂಡ್ ಫಾರ್ ಹಂಟಿಂಗ್ ಕಮ್ಯುನಿಸ್ಟ್ (ಕಮ್ಯುನಿಸ್ಟರನ್ನು ಬೇಟೆಯಾಡುವ ಸಂಸ್ಥೆ) ಪ್ರಜಾತಾಂತ್ರಿಕ ವ್ಯವಸ್ಥೆಗಾಗಿ ದುಡಿಯುತ್ತಿರುವ ಅನೇಕ ಸಂಘಟನೆಗಳಿಗೆ ಬೆದರಿಕೆಯ ಪತ್ರಗಳನ್ನು ಬರೆದು 1979 ಅಂತಿಮ ಸಂಘರ್ಷದ ವರ್ಷವಾಗಲಿದೆಯೆಂದೂ ಎಚ್ಚರಿಕೆ ನೀಡಿದೆ! ಬ್ರೆಝಿಲ್‌ನಲ್ಲಿ ಈಗ ಕಾಣಿಸಿಕೊಳ್ಳುತ್ತಿರುವ ಸಂಕಷ್ಟಗಳಿಗೆ ಕಾರ್ಮಿಕ ವರ್ಗವೇ ಹೊಣೆಯೆಂದೂ ಪ್ರತಿಗಾಮಿಗಳು ದೂಷಿಸುತಿದ್ದಾರೆ. "ರಾಷ್ಟ್ರೀಯ ಸುಭದ್ರತೆ"ಯ ಸೂತ್ರಕ್ಕೆ ಅನುಗುಣವಾಗಿ ಸಶಸ್ತ್ರ ಪಡೆಗಳು, ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳ 'ವಿಧ್ವಂಸಕಾರಿ' ಚಟುವಟಿಕೆಗಳನ್ನು ಕ್ರೂರವಾಗಿ ಹತ್ತಿಕ್ಕಬೇಕೆಂಬುದೇ ಈ ಅರ್ಥಹೀನ ಮಾತುಗಳ ಹಿಂದಿರುವ ವಾಸ್ತವಿಕತೆ.

ಈ ನೀತಿಯನ್ನು ಟೀಕಿಸಿರುವ ಅರ್ಜಂಟೀನಾದ ಪತ್ರಿಕೆ 'ಮೊವಿಮಿಯೆಂಟೋ ಒಬ್ರಿಯೋ' ಹೀಗೆ ಬರೆದಿದೆ. "ವೇತನಗಳನ್ನು ಅವುಗಳ ಕೊಂಡುಕೊಳ್ಳುವ ಸಾಮರ್ಥ್ಯದ ಅರ್ಧಾಂಶದಷ್ಟಕ್ಕೆ ಇಳಿಸಿಬಿಡುವುದಕ್ಕಿಂತ, ಮತ್ತು ದುಡಿಮೆಗಾರರು ತಮ್ಮ ಅನ್ನವನ್ನಾದರೂ ಗಳಿಸಿಕೊಳ್ಳಲು ಎಂದಿಗಿಂತ ಎರಡು ಪಾಲಷ್ಟು ಜಾಸ್ತಿ ಕೆಲಸ ಮಾಡುವಂತೆ ಅವರನ್ನು ಬಲವಂತಪಡಿಸುವುದಕ್ಕಿಂತ ಹೆಚ್ಚಿನ ವಿಧ್ವಂಸಕ ಕೃತ್ಯ ಇನ್ನೊಂದಿಲ್ಲ"! ಸ್ವಾಮ್ಯವರ್ಗದ ವಿವಿಧ ವಿಭಾಗಗಳಂತೂ ತಮ್ಮ ಉದಾರ ನೀತಿಯನ್ನು ಮೇಲ್ಪಟ್ಟಕ್ಕಷ್ಟೇ ಸೀಮಿತಗೊಳಿಸಬಯಸುತ್ತವೆ. ಪ್ರವರ್ಧಮಾನಕ್ಕೆ ಬರುತ್ತಿರುವ ಸಾಮಾಜಿಕ, ಆರ್ಥಿಕ ಚೌಕಟ್ಟನ್ನು ಬದಲಾಯಿಸುವ ಇಚ್ಛೆ ಅವುಗಳಿಗಿಲ್ಲ. ಸ್ಥಳೀಯ ಏಕಸ್ವಾಮ್ಯವಾದಿ ಬಂಡವಾಳಶಾಹಿ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಪ್ರಾಬಲ್ಯವನ್ನು ಅವು ಹಾಗೆಯೇ ಉಳಿಸಿಕೊಳ್ಳಲು ಬಯಸುತ್ತವೆ.

ಪುರೋಗಾಮಿಗಳ ಬದಲಿ ಕಾರ್ಯಕ್ರಮ:

ಪುರೋಗಾಮಿ ಶಕ್ತಿಗಳು ಸರ್ವಾಧಿಕಾರಿ ಆಡಳಿತೆಗಳ ವಿರುದ್ಧ ಸಂಯುಕ್ತ ಹೋರಾಟಕ್ಕೆ ಕರೆನೀಡುತ್ತಿರುವ ವೇಳೆಯಲ್ಲೇ ತಮ್ಮದೇ ಬದಲಿ ಕಾರ್ಯಕ್ರಮವನ್ನು ಜನತೆಯ ಮುಂದಿರಿಸುವುದು ಅಗತ್ಯವೆಂದು ಭಾವಸಿದ್ದಾರೆ. ಈ ಬದಲಿ ಕಾರ್ಯಕ್ರಮವು ಏಕಕಾಲಕ್ಕೆ ಫ್ಯಾಸಿಸಂಗೆ ವಿರುದ್ಧವಾದ ಮತ್ತು ಪ್ರಜಾಸತ್ತೆಗಾಗಿ ನಡೆಯುವ ಚಳುವಳಿ ಹಾಗೂ ಸ್ಥಳೀಯ ಗುತ್ತೇದಾರಿ ಬಂಡವಾಳ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಆರ್ಥಿಕ ಪ್ರಾಬಲ್ಯದ ವಿರುದ್ಧ ನಡೆಯುವ ಚಳುವಳಿಯೊಂದಿಗೆ ನಿಕಟ ಸಂಬಂಧ ಹೊಂದಿರಬೇಕಾಗಿದೆ. ಈ ಚಳುವಳಿಯ ಏಕಸ್ವಾಮ್ಯವಿರೋಧಿ ಸ್ವರೂಪದಿಂದಾಗಿ ದುಡಿಯುವವರ್ಗ ಮತ್ತು ಕಾರ್ಮಿಕರು ಮಾತ್ರವಲ್ಲ, ಸಮಾಜದ ಮಧ್ಯಮವರ್ಗ, ಹಾಗೂ ಸ್ವಾಮ್ಯವರ್ಗದೊಳಗಣ ಏಕಸ್ವಾಮ್ಯೇತರ ವಿಭಾಗಗಳನ್ನು ಕೂಡ ತನ್ನತ್ತ ಆಕರ್ಷಿಸಬಲ್ಲರು. ಮಧ್ಯಮವರ್ಗ ಮತ್ತು ಏಕಸ್ವಾಮ್ಯೇತರ ಸ್ವಾಮ್ಯವರ್ಗಗಳು ಮೊದಲು ನಿರಂಕುಶಾಧಿಕಾರಿ ಆಳ್ವಿಕೆಯ ಧೋರಣೆಗಳ ಕುರಿತು ಅನೇಕ ಭ್ರಮೆಗಳನ್ನು ಹೊಂದಿದ್ದರೂ ಈ ಭ್ರಮೆ ಕ್ರಮೇಣ ತೊಲಗುತ್ತಿದೆ, ಅವೂ ಈಗ ನಿರಂಕುಶಾಧಿಕಾರವನ್ನು ವಿರೋಧಿಸಲಾರಂಭಿಸಿವೆ.

ಮತ ಪಾರಂಪರ್ಯವಾದ ಆಡಳಿತೆಯಿರುವ ಸಾಂಪ್ರದಾಯಿಕ ಸರ್ವಾಧಿಕಾರಿ ರಾಷ್ಟ್ರಗಳಲ್ಲೂ (ಉದಾ:ಹೈತಿ) ಮತ್ತು ಭೂಒಡೆತನವುಳ್ಳ ಮನೆತನಗಳ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬರುತ್ತಿರುವ ರಾಷ್ಟ್ರಗಳಲ್ಲೂ(ಎಲ್‌ಸಾಲ್ವಡಾರ್ ಮತ್ತು ಗ್ವಾಚೆಮಾಲಾ) ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗಟ್ಟಾಗುತ್ತಿರುವುದು ಅಲ್ಲಿನ ಜನಕೀಯ ಆಂದೋಲನಗಳನ್ನು ವಿಸ್ತಾರಗೊಳಿಸುವಲ್ಲಿ ಮಹತ್ವದ ಪಾತ್ರವಹಿಸುತ್ತಿದೆ.

ನಿಕಾರಾಗುವಾದ ವಿಜಯ :

ನಿಕಾರಾಗುವಾದ ಜನವಿರೋಧಿ ಆಡಳಿತೆಯ ವಿರುದ್ಧ ಸಾಂಡಿನಿಸ್ಟ್ ನ್ಯಾಶನಲ್ ಲಿಬರೇಶನ್ ಫ್ರಂಟ್ ಮತ್ತು ಇತರ ವಿರೋಧಪಕ್ಷೀಯ ಸಂಘಟನೆಗಳು ಒಂದಾಗಿ ಸಶಸ್ತ್ರ ಹೋರಾಟ ನಡೆಸಿದುದರ ಪರಿಣಾಮವಾಗಿ ಸೋಮೋಜಾನ ದುರಾಡಳಿತವು ಕೊನೆಗೊಂಡಿದೆ. ಈ ದೇಶದ ರಾಷ್ಟ್ರಪ್ರೇಮಿ ಶಕ್ತಿಗಳು ತಮ್ಮ ದೇಶದ ಪುನರುತ್ಥಾನಕ್ಕಾಗಿ ಈ ಐಕ್ಯವನ್ನು ಉಳಿಸಿಕೊಳ್ಳಲೂ ಬೆಳೆಸಲೂ ಬಯಸಿವೆ. ನಿಕಾರಾಗುವಾ ಜನತೆಯ ವಿಜಯವು ಸ್ವಾತಂತ್ರ್ಯ ಮತ್ತು ಪ್ರಗತಿಗಾಗಿ ಹೋರಾಡುವ ಜನತೆಗೆ ಪ್ರಬಲ ಸ್ಫೂರ್ತಿ ನೀಡಿದೆ. ಮಧ್ಯ ಅಮೇರಿಕಾದ ಸರ್ವಾಧಿಕಾರಿಗಳ ಅಧಿಕಾರವನ್ನು ಇನ್ನಷ್ಟು ಅಸ್ಥಿರಗೊಳಿಸಿದೆ ಮತ್ತು ಬದಲಾವಣೆಯ ಕಡೆಗೆ ಜನತೆಯ ಒಲವು ಹೆಚ್ಚುವಂತೆ ಮಾಡಿದೆ.

ಎಲ್‌ಸಾಲ್ವಡಾರ್‌ನಲ್ಲೂ ಸಾಮಾಜಿಕ ಮತ್ತು ಆರ್ಥಿಕ ಚೌಕಟ್ಟಿನ ಆಧುನೀಕರಣದ ಉದ್ದೇಶದಿಂದ ಜಾರಿಗೆ ತರಲಾಗಿದ್ದ ಮತ್ತು ಅತಿಪ್ರಚಾರ ನೀಡಲ್ಪಟ್ಟ ಕಾರ್ಯಕ್ರಮಗಳು ಆ ದೇಶದ ಕೆಲವೇ ಜನರನ್ನು ಮಾತ್ರ ಶ್ರೀಮಂತರನ್ನಾಗಿರಿಸಿವೆ ಹಾಗೂ ಬಹುಸಂಖ್ಯಾತ ಜನತೆಯನ್ನು ಬಡತನದ ಗರ್ತಕ್ಕೆ ತಳ್ಳಿವೆ. ಇಲ್ಲಿ 1977ರ ಚುನಾವಣೆಯಲ್ಲಿ ಕಮ್ಯುನಿಸ್ಟರು, ಕ್ರಿಶ್ಚಿಯನ್ ಡೆಮೊಕ್ರಟ್‌ಗಳು ಮತ್ತು ದೇಶಪ್ರೇಮಿ ಸೈನಿಕರು ಒಂದಾಗಿ ರಚಿಸಿದ್ದ ದೇಶಪ್ರೇಮಿ ರಂಗವು ಜಯಗಳಿಸಿದಾಗ ಅದನ್ನು ಆಳುವ ದುಷ್ಟಕೂಟವು ರದ್ದುಪಡಿಸಿತು. ಈ ಅಕ್ರಮದ ವಿರುದ್ಧ ಜನತೆ ನಡೆಸಿದ ಹೋರಾಟವನ್ನು ಹತ್ತಿಕ್ಕಲು ಆಳುವ ಕೂಟವು ತುಂಬಾ ಪ್ರಯಾಸಪಡಬೇಕಾಯಿತು. ದೇಶದ ಆಳುವ ಸರ್ವಾಧಿಕಾರಿ ಮನೆತನಗಳು ತಮ್ಮ ಅಧಿಕಾರವನ್ನುಳಿಸಿಕೊಳ್ಳಲು ಹೆಚ್ಚುಹೆಚ್ಚು ಭಯೋತ್ಪಾದಕ ಕೃತ್ಯಗಳನ್ನೂ, ದಮನಕಾರಿಕ್ರಮಗಳನ್ನೂ ಕೈಗೊಳ್ಳುತ್ತಿವೆಯೆಂಬುದು ಇತ್ತೀಚಿನ ವಿದ್ಯಮಾನಗಳಿಂದ ವ್ಯಕ್ತವಾಗಿದೆ.

ಗ್ವಾಟೆಮಾಲಾದಲ್ಲಿ ವಿಮೋಚನಾ ಚಳುವಳಿಯ ಪ್ರಗತಿಯನ್ನು ತಡೆಹಿಡಿಯಲು ಅಲ್ಲಿನ ಪ್ರತಿಗಾಮಿಗಳು ಇಂತಹದೇ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ ಕಾಲು ಶತಮಾನದ ಹಿಂದೆ ಜಾಕೋಬೋ ಅರ್ಬೆಂಡ್ಸ್ ಅವರ ಸಾಮ್ರಾಜ್ಯಶಾಹಿ ವಿರೋಧಿ ಸರಕಾರವನ್ನು ಉರುಳಿಸಿದ ಪ್ರತಿಕ್ರಾಂತಿವಾದಿ ಶಕ್ತಿಗಳು ಈಗಲೂ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಮಣಿಸಲು ಭಯೋತ್ಪಾದನೆ ಮತ್ತು ದಮನ ಕಾರ್ಯವನ್ನು ಕೈಗೆತ್ತಿಕೊಂಡಿವೆ. ಹಾಗಿದ್ದರೂ ಈ ದೇಶದಲ್ಲಿ ವಿಮೋಚನಾ ಚಳುವಳಿ ಭರದಿಂದ ಮುಂದೆ ಸಾಗುತ್ತಿದೆ; ಈವರೆಗೂ ರಾಜಕೀಯದಿಂದ ದೂರವಿದ್ದ ಜನವಿಭಾಗಗಳನ್ನು ಮುಖ್ಯವಾಗಿ ಇಂಡಿಯನ್ ರೈತ ಸಮುದಾಯವನ್ನು ಚಳುವಳಿಯು ಕಡೆಗೆ ವಿಶೇಷವಾಗಿ ಆಕರ್ಷಿಸುತ್ತಿದೆ.

ಪ್ರತಿಗಾಮಿ ಆಳ್ವಿಕೆಗಳು ಹೀಗೆ ಗಂಭೀರವಾದ ಸವಾಲುಗಳನ್ನು ಎದುರಿಸುತ್ತಿವೆ ಮತ್ತು ಸಂಯುಕ್ತಅಮೇರಿಕಾ ಸಂಸ್ಥಾನದ ಆಶ್ರಿತ ರಾಜ್ಯಗಳೆಲ್ಲ ಸದಾ ಕಾಲಯುದ್ಧದಸ್ಥಿತಿಯಲ್ಲೇ ಇರಬೇಕಾಗಿದೆ. ಈಗಿನ ಪ್ರವಾಹದವಿರುದ್ಧ ಸಾಗುವುದು ಮತ್ತಷ್ಟು ಸೋಲಿಗೆ ಕಾರಣವಾದೀತೆನ್ನುವುದು ಅವಕ್ಕೆ ಗೊತ್ತಾಗುತ್ತಿದೆ. 1970ರ ದಶಕದ ಆರಂಭದಲ್ಲಿ ಚಿಲಿಯಲ್ಲಿ ಪ್ರತಿಕ್ರಾಂತಿಯಾದ ಬಳಿಕ ಲ್ಯಾಟಿನ್ ಅಮೇರಿಕಾದ ಸ್ವಾತಂತ್ರ್ಯ ವಿರೋಧಿಗಳು ತಮ್ಮಲ್ಲಿನ ರಾಜಕೀಯ ಬೆಳವಣಿಗೆಗಳನ್ನು ತಡೆಯುವುದು ಸಾಧ್ಯವೆಂದು ಭಾವಿಸಿದ್ದರು. ಆದರೆ ಈಗಿನ ವಾಸ್ತವಿಕತೆ ಅವರ ಭ್ರಮೆಯನ್ನು ನುಚ್ಚುನೂರಾಗಿರಿಸುತ್ತಿದೆ.

ಪ್ರಜಾಸತ್ತೆಗಾಗಿ ಹೋರಾಟ :

ಸೈನಿಕ ಆಡಳಿತೆಗಳು ಅಧಿಕಾರವನ್ನು ನಾಗರಿಕರಿಗೆ ಮರಳಿಸಲೂ ಮತ್ತು ಸಾಂವಿಧಾನಿಕ ಸರಕಾರ ರಚನೆಗೂ ಒಪ್ಪಿಕೊಂಡಿರುವಂತಹ ರಾಷ್ಟ್ರಗಳಲ್ಲಿ ಪ್ರಜಾಸತ್ತೆ ಮತ್ತು ಸಾಮಾಜಿಕ ಪ್ರಗತಿಗಾಗಿ ನಡೆಯುತ್ತಿರುವ ಹೋರಾಟದ ಪ್ರಕಾರಗಳು ತುಂಬಾ ಮಹತ್ವದ್ದಾಗಿವೆ. ಉದಾಹರಣೆಗೆ ಇಕ್ವಡಾರ್‌ನಲ್ಲಿ ಈಗಾಗಲೇ ಸಂವಿಧಾನವೊಂದನ್ನು ರಚಿಸಲಾಗಿದೆ ಮತ್ತು ಅದರ ಆಧಾರದ ಮೇಲೆ 1977ರ ಏಪ್ರಿಲ್‌ನಲ್ಲಿ ಅಧ್ಯಕ್ಷೀಯ ಚುನಾವಣೆಗಳು ನಡೆದಿವೆ. ಇದಾದ ಐದು ತಿಂಗಳ ಬಳಿಕ ಕಳೆದ ಏಳು ವರ್ಷಗಳಿಂದಲೂ ಆಡಳಿತ ನಡೆಸುತ್ತಿದ್ದ ಇಕ್ವಡಾರ್‌ನ ಸೈನಿಕ ಆಡಳಿತಗಾರರು ರಿಪಬ್ಲಿಕ್ ಜೈಮ್ ರೋಲ್ಡೋಸ್‌ನ ಅಧ್ಯಕ್ಷರ ನೇತೃತ್ವದಲ್ಲಿ ರಚಿತವಾದ ಸಾಂವಿಧಾನಿಕ ನಾಗರಿಕ ಸರಕಾರಕ್ಕೆ ಅಧಿಕಾರವನ್ನು ಹಸ್ತಾಂತರಿಸಿದರು. ಇವುಗಳ ಪ್ರಾಮುಖ್ಯತೆ ಸರಕಾರದ ಸ್ವರೂಪ ಬದಲಾವಣೆಯಾದುದಕ್ಕೆ ಮಾತ್ರ ಸೀಮಿತವಾದುದಲ್ಲ; ಅದಕ್ಕಿಂತಲೂ ಹೆಚ್ಚಿನ ಮಹತ್ವ ಇವುಗಳಿಗಿದೆ. ಸೈನ್ಯ ಅಧಿಕಾರದಲ್ಲಿದ್ದಾಗ ಅಥವಾ ಅದು ಪ್ರಭುತ್ವದ ವ್ಯವಹಾರಗಳನ್ನು ನಡೆಸುವಲ್ಲಿ ಸಕ್ರಿಯ ಪಾತ್ರವಹಿಸುತ್ತಿದ್ದ ಕಾಲದಲ್ಲಿ ಪೆರು ಮತ್ತು ಪನಾಮದಂತಹ ರಾಷ್ಟ್ರಗಳಲ್ಲೂ ಸಾಮ್ರಾಜ್ಯಶಾಹಿ ಮತ್ತು ವಂಶಾಧಿಪತ್ಯಕ್ಕೆ ವಿರುದ್ಧವಾದ ಅನೇಕ ಪರಿವರ್ತನೆಗಳಾಗಿವೆ.

ಪೆರುವಿನಂತಹ ರಾಷ್ಟ್ರಗಳಲ್ಲಿ ಸೈನ್ಯವು ಅನುಷ್ಠಾನಕ್ಕೆ ತಂದಂತಹ ಸುಧಾರಣೆಗಳನ್ನು ಬೂರ್ಜ್ವಾ ಪತ್ರಿಕೆಗಳು ಟೀಕೆ ಮಾಡಿವೆ. ರಾಷ್ಟ್ರೀಯ ಸಮಸ್ಯೆಗಳಿಗೆ ಆರ್ಥಿಕ ಪರಿಹಾರಗಳ ಬದಲು ರಾಜಕೀಯ ಪರಿಹಾರ ನೀಡಿದುದಕ್ಕಾಗಿ (ಉದಾಹರಣೆಗೆ ರಾಷ್ಟ್ರೀಕರಣ ಮತ್ತು ಸರಕಾರೀಕರಣದಂತಹ ಕ್ರಮಗಳು) ಪೆರುವಿನ ಪತ್ರಕರ್ತ ಆರ್ಟುರೋ ಲಾರ್ರೈನ್ ಸೈನ್ಯಾಡಳಿತವನ್ನು ಕಟುವಾಗಿ ಟೀಕಿಸಿದ್ದಾನೆ. ಅಂದರೆ ಶೋಷಕ ವರ್ಗವನ್ನು ಬೆಂಬಲಿಸುವ ಇತರರಂತೆ ಲಾರ್ರೈನ್ ಕೂಡ ಪ್ರತಿಷ್ಠಿತವರ್ಗ ಮತ್ತು ವಿದೇಶೀ ಏಕಸ್ವಾಮ್ಯವಾದಿಗಳ ಹಿತಕ್ಕೆ ಧಕ್ಕೆಯುಂಟುಮಾಡಬಲ್ಲ, ವಂಶಪರಂಪರಾಗತ ಆಡಳಿತಕ್ಕೆ ವಿರುದ್ಧವಾದ ಹಾಗೂ ಸಾಮ್ರಾಜ್ಯಶಾಹಿಗೆ ವಿರುದ್ಧವಾದ ಪರಿವರ್ತನೆಗಳನ್ನು ಸಹಿಸುತ್ತಿಲ್ಲ. ಹಾಗಾಗಿ ಚಿಲಿ ಮತ್ತು ಇತರ ಕಡೆ ನಡೆಸಲಾದ ಪ್ರತಿಕ್ರಾಂತಿಗಳನ್ನು ಲಾರ್ರೈನ್ ಮೆಚ್ಚುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. 'ಇಂತಹ ಪ್ರತಿಕ್ರಾಂತಿಗಳು ಆರ್ಥಿಕ ಅಭಿವೃದ್ಧಿಯ ನಿಯಮಗಳ ಮರುಸ್ಥಾಪನೆಗೆ ಕಾರಣವಾದವು (ಅಂದರೆ ದುಡಿಯುವ ವರ್ಗವನ್ನು ಕ್ರೂರ ಶೋಷಣೆಗೆ ಒಳಪಡಿಸಿ ಆ ಮೂಲಕ ಬಂಡವಾಳಶಾಹಿ ವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು) ಮತ್ತು ರಾಷ್ಟ್ರೀಯ ಅರ್ಥವ್ಯವಸ್ಥೆಯ 'ರಾಜಕೀಯ ಕಾರಣ'ವನ್ನು ಕೊನೆಗೊಳಿಸಿದವು ಎಂದೂ ಆತ ಹೇಳುವುದು ಆಕಸ್ಮಿಕವಲ್ಲ!

ಈ ಸುಧಾರಣೆಗಳನ್ನು ಟೀಕಿಸುವವರಲ್ಲಿ ತೀವ್ರ ಎಡಪಂಥವಾದಿಗಳೂ ಬಲಪ್ರತಿಗಾಮಿಗಳಿಗಿಂತ ಹಿಂದುಳಿದಿಲ್ಲ. ಇಂತಹ ಬದಲಾವಣೆಗಳು ಅರ್ಥಹೀನವೆಂದೂ ಅವು ಜನರನ್ನು ವಂಚಿಸುವ

ಇರಾದೆಯಿಂದ ಕೂಡಿವೆಯೆಂದೂ ಬಂಡವಾಳಶಾಹಿಯನ್ನು ಆಧುನೀಕರಣಗೊಳಿಸುವುದು ಮತ್ತು ಶೋಷಕ ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ನೆಲೆಗೊಳಿಸುವುದು ಇವಿಷ್ಟೇ ಈ ಪರಿವರ್ತನೆಗಳ ಮುಖ್ಯ ಗುರಿಯೆಂದೂ ಅವರ ಆರೋಪ. ವಿಮೋಚನಾ ಚಳುವಳಿಗಳ ಸಾಧನೆಗಳನ್ನು ಈ ರೀತಿ ಟೀಕಿಸುವ ಬಲಪ್ರತಿಗಾಮಿ ಮತ್ತು ಎಡ ಪಂಥವಾದಿಗಳ ಪ್ರಯತ್ನಗಳನ್ನು ಪ್ರಗತಿಶೀಲ ಶಕ್ತಿಗಳು ಪರಿಣಾಮಕಾರಿಯಾಗಿ ಎದುರಿಸುತ್ತಿದ್ದಾರೆ.

ಕುಂದುಕೊರತೆಗಳಿದ್ದರೂ...

ಸೈನಿಕ ಆಡಳಿತೆಯ ಒಂದು ವಿಭಾಗವು ಬದಲಾವಣೆಗಳನ್ನು ಜಾರಿಗೆ ತರುವಲ್ಲಿ ಕಾರ್ಮಿಕರು ವಹಿಸುವ ಸಕ್ರಿಯ ಪಾತ್ರವನ್ನು ಕಡೆಗಣಿಸುತ್ತಿದೆ ಮತ್ತು ಜನತೆಯ ಕಡೆಗೆ ಕೇವಲ ಔದಾರ್ಯವನ್ನು ಮಾತ್ರ ತೋರಿಸುತ್ತಿದೆ. ಸೈದ್ಧಾಂತಿಕ ಕ್ಷೇತ್ರದಲ್ಲಿ ಕಪಟ ಕ್ರಾಂತಿಕಾರಿಗಳು ಮಾಡುತ್ತಿರುವ ವಿಭಜನಾ ಚಟುವಟಿಕೆಗಳನ್ನೂ ಅದು ಅಲಕ್ಷಿಸುತ್ತಿದೆ. ವಿಮೋಚನಾ ಚಳುವಳಿಯಲ್ಲಿ ಇಂತಹ ಕುಂದುಕೊರತೆ ಮತ್ತು ಹಿನ್ನಡೆಗಳಿದ್ದರೂ ಪುರೋಗಾಮಿಗಳು ಅದರ ಯಶಸ್ಸನ್ನು ವಿಶೇಷ ಬೆಲೆಯುಳ್ಳದ್ದಾಗಿ ಪರಿಗಣಿಸುತ್ತಾರೆ.

ಆದ ಕಾರಣ, 1968ರ ಅಕ್ಟೋಬರ್‌ನಲ್ಲಿ ಪೆರುವಿನ ಜನರಲ್ ವೆಲಾಸ್ಕೋ ಅಲ್ವರಾಡೋನ ನೇತೃತ್ವದ ಸರಕಾರ ಪ್ರಾರಂಭಿಸಿದ್ದ ಸುಧಾರಣಾ ಕ್ರಮಗಳ ಹಿನ್ನೆಲೆಯನ್ನು ಪೆರುವಿನ ಕಮ್ಯುನಿಸ್ಟರು ಊಹಿಸಿ, ಈ ಪರಿವರ್ತನೆ ಶೋಷಕ ವರ್ಗದ ಹಿತದೃಷ್ಟಿಯಿಂದ ಮಾಡಲ್ಪಟ್ಟಿದ್ದರೂ ವೆಲಾಸ್ಕೋ ಅಲ್ವರಾಡೋ ಮತ್ತು ಅವನ ಬೆಂಬಲಿಗರು ಸಾಮ್ರಾಜ್ಯಶಾಹಿಗೆ ಮತ್ತು ವಂಶಾನುಗತ ಆಳ್ವಿಕೆಗೆ ವಿರುದ್ಧವಾದ ಬದಲಾವಣೆಗಳನ್ನು ತಂದಿದ್ದಾರೆಂದೂ ಒತ್ತಿ ಹೇಳಿದ್ದಾರೆ. ಈ ಬದಲಾವಣೆಗಳಿಂದಾಗಿ ದುಡಿಯುವ ವರ್ಗದ ಒಗ್ಗಟ್ಟು ಸ್ಥಿರವಾಗಿ ನೆಲೆಗೊಳಿಸಲ್ಪಟ್ಟಿತೆಂದೂ, ಅದರ ರಾಜಕೀಯ ಪ್ರಜ್ಞೆ ವರ್ಧಿಸಿ, ರೈತಾಪಿ ಜನರನ್ನು ಒಂದುಗೂಡಿಸಿ ಬುದ್ಧಿಜೀವಿಗಳ ಮಧ್ಯೆ ಪುರೋಗಾಮಿ ಮನೋಭಾವಗಳ ಪ್ರಭಾವ ಉನ್ನತ ಹಂತಕ್ಕೆ ಬಂತೆಂದೂ ಪೆರುವಿನ ಕಮ್ಯುನಿಸ್ಟರು ಹೇಳುತ್ತಿದ್ದಾರೆ. ಇವು ಸೈನ್ಯದಲ್ಲೂ ತಮ್ಮ ಪ್ರಭಾವ ಬೀರದಿರಲಿಲ್ಲ. ಪೆರುವಿನ ಕಮ್ಯುನಿಸ್ಟ್ ಮುಂದಾಳು ಜೋರ್ಜ್ ಡೆಲ್‌ಪ್ರಾಡೋನ ಅಭಿಪ್ರಾಯದಂತೆ "ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಪುರೋಗಾಮಿ ವಿಚಾರಗಳು ಸೈನಿಕರ ನಡುವೆಯೂ ಆಳವಾಗಿ ಬೇರುಬಿಟ್ಟವು." ಈ ಪ್ರದೇಶದ ರಾಷ್ಟ್ರಗಳಲ್ಲಿನ ಪುರೋಗಾಮಿಗಳು ತಮ್ಮ ಸಂಘಟನೆಗಳನ್ನು ಬಲಪಡಿಸಿಕೊಂಡು ಪ್ರಜಾಸತ್ತೆಗಾಗಿ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ತಾವು ಗಳಿಸಿದ ಯಶಸ್ಸನ್ನು ಸ್ಥಿರಗೊಳಿಸಲು ಮತ್ತು ವಿಮೋಚನಾ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸಲು ಶ್ರಮಿಸುತ್ತಿದ್ದಾರೆ.

"ನಾವು ನಮ್ಮ ಸಧ್ಯದ ಬೇಡಿಕೆಗಳ ಈಡೇರಿಕೆಗಾಗಿ ಮಾತ್ರ ಹೋರಾಡುತ್ತಿಲ್ಲ, ನಮ್ಮ ಹೋರಾಟವು ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರ ಸೀಮಿತವಾಗಿರಕೂಡದು. ಇಡೀ ದೇಶಕ್ಕೆ ಅನ್ವಯವಾಗುವ ಸಮಸ್ಯೆಗಳು ಕಾರ್ಮಿಕ ವರ್ಗವನ್ನು ಬಾಧಿಸುತ್ತಿವೆ." ಎಂಬುದಾಗಿ ಕೌನ್ಸಿಲ್ ಆಫ್ ದಿ ಕಾನ್ಫೆಡೆರೇಶನ್ ಆಫ್ ಇಕ್ವಡೋರಿಯನ್ ವರ್ಕರ್ಸ್ ಸಂಘಟನೆಯ ಉಪಾಧ್ಯಕ್ಷ ಲೂಯಿಸ್ ವಾಲ್ಡಿವೀಸೋ ಮೊರಾನ್ ಹೇಳಿದ್ದಾರೆ. ಇಂದು ಇಕ್ವೆಡಾರಿನ ರಾಷ್ಟ್ರೀಯ ಸಾರ್ವಭೌಮತೆ ಮತ್ತು ಅದರ ಸಂಪನ್ಮೂಲಗಳನ್ನು ರಾಷ್ಟ್ರದ ನಿಯಂತ್ರಣಕ್ಕೇ ಮರಳಿಸುವುದಕ್ಕಾಗಿ ನಡೆಯುತ್ತಿರುವ ಚಳುವಳಿಯಲ್ಲಿ ಇಕ್ವೆಡಾರಿನ ದುಡಿಯುವ ವರ್ಗ ಮುಂಚೂಣಿಯಲ್ಲಿದೆ.

ಮಹತ್ವದ ಬದಲಾವಣೆಗಳು :

ವಿಮೋಚನಾ ಚಳುವಳಿಯ ಬೆಳವಣಿಗೆಯ ದೃಷ್ಟಿಯಿಂದ ಪನಾಮದಲ್ಲೂ ಬಹುಮಹತ್ವದ ಬದಲಾವಣೆಗಳಾಗುತ್ತಿವೆ. 1968ರ ಅಕ್ಟೋಬರ್‌ನಲ್ಲಿ ಜನರಲ್ ಓಮರ್ ಟೊರ್ರಿಚೋಸ್ ಅವರ ನೇತೃತ್ವದ ರಾಷ್ಟ್ರಪ್ರೇಮಿ ಮನೋಭಾವದ ಸರಕಾರ ಅಧಿಕಾರಕ್ಕೆ ಬಂದು ಅದು ಜನತೆಯ ಜೊತೆ ಸಂಪರ್ಕ ಬೆಳೆಸಲಾರಂಭಿಸಿದ ಮೇಲೆ ಸ್ಥಳೀಯ ವಂಶಾಧಿಪತ್ಯದ ಶಕ್ತಿಗಳ ಮತ್ತು ಸಾಮ್ರಾಜ್ಯಶಾಹಿಗಳ ಒಕ್ಕೂಟದ ಮೇಲೆ ಆದರಿಸಲ್ಪಟ್ಟಿದ್ದ ಸಾಮಾಜಿಕ, ರಾಜಕೀಯ ವ್ಯವಸ್ಥೆಯನ್ನು ಅಲುಗಾಡಿಸಲು ಹೆಚ್ಚು ಅನುಕೂಲಕರ ಪರಿಸ್ಥಿತಿ ನಿರ್ಮಾಣವಾಗಿದೆ. ಸಾಮಾಜಿಕ, ಆರ್ಥಿಕ ಬದಲಾವಣೆಗಳ (ಸಾರ್ವಜನಿಕ ಕ್ಷೇತ್ರದ ರಚನೆ, ವ್ಯವಸಾಯ ಸಹಕಾರ ಸಂಘಗಳ ನಿರ್ಮಾಣ, ಶೈಕ್ಷಣಿಕ ಮತ್ತು ಸ್ವಾಸ್ಥ್ಯ ಸುಧಾರಣಾ ಕ್ರಮಗಳು ಇತ್ಯಾದಿ) ಜೊತೆಗೆ ಜನತೆಯ ಪ್ರಜಾಸತ್ತಾತ್ಮಕ ಅಧಿಕಾರ ಸಂಸ್ಥೆಗಳು ಸ್ಥಳೀಯ ಹಂತದಲ್ಲೂ ಕೇಂದ್ರದಲ್ಲೂ ಸ್ಥಾಪಿಸಲ್ಪಟ್ಟಿವೆ.

ಪನಾಮದಲ್ಲಿ ಸುಮಾರು 3000ಕ್ಕೂ ಮಿಕ್ಕಿ 'ಜಂಟಾ' (ಸ್ವಯಮಾಡಳಿತ ಸಂಸ್ಥೆ)ಗಳಿವೆ. ಇವು ದುಡಿಯುವ ಜನಸಮುದಾಯವನ್ನು ರಾಜಕಾರಣದಲ್ಲಿ ತೊಡಗಿಸಲು ವಿಶಾಲ ಚಳುವಳಿಯೊಂದನ್ನು ಪ್ರಾರಂಭಿಸಿವೆ. ಜನತೆ ಮತ್ತು ಸೈನ್ಯದ ನಡುವೆ ಸಹಯೋಗವನ್ನು ಬೆಳೆಸುವಲ್ಲಿ ಇವು ಮುಖ್ಯ ಪಾತ್ರ ವಹಿಸುತ್ತಿವೆ. ಪ್ರಗತಿಶೀಲ ಮತ್ತು ದೇಶಪ್ರೇಮಿ ಶಕ್ತಿಗಳ ಐಕ್ಯವನ್ನು ಸುಭದ್ರಗೊಳಿಸುವಲ್ಲಿ ಇದು ಬಹು ಮಹತ್ವದ ಕಾರ್ಯ. ಸಾಂಪ್ರದಾಯಿಕ ಬೂರ್ಜ್ವಾ ಪಾರ್ಲಿಮೆಂಟನ್ನು (ಪ್ರತಿನಿಧಿಗಳ ಸಭೆ) ರದ್ದುಗೊಳಿಸಿ ಅದರ ಸ್ಥಾನದಲ್ಲಿ ಹೆಚ್ಚಾಗಿ ರೈತರು, ಶ್ರಮಿಕರು, ಪುರೋಗಾಮಿ ಬುದ್ಧಿಜೀವಿಗಳು ಮತ್ತು ಸರಕಾರೀ ಅಧಿಕಾರಿಗಳೇ ಉಳ್ಳ ನ್ಯಾಶನಲ್ ಅಸೆಂಬ್ಲಿ ಆಫ್ ಕಮ್ಯುನಿಟಿ ರೆಪ್ರೆಸೆಂಟೆಟಿವ್ಸನ್ನು ಸ್ಥಾಪಿಸಲಾಗಿದೆ. 1978ರಲ್ಲಿ ನ್ಯಾಶನಲ್ ಎಸೆಂಬ್ಲಿಗೆ ನಡೆದ ಚುನಾವಣೆಯಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಗೆಲುವುಂಟಾಯಿತಲ್ಲದೆ ಅದರಲ್ಲಿ ದುಡಿಯುವ ಜನತೆಯ ಪ್ರತಿನಿಧಿತ್ವದ ಪ್ರಮಾಣವೂ ಹೆಚ್ಚಾಯಿತು. (80 6%).

ಇಲ್ಲಿನ ಸರಕಾರಿ ಯಂತ್ರದಲ್ಲೂ ಅವಶ್ಯಕ ಮಾರ್ಪಾಟು ಮಾಡಲಾಗಿದೆ. ಸರಕಾರದ ಹಿಂದಿನ ಮುಖ್ಯಸ್ಥ ಮತ್ತು ವಿಮೋಚನಾ ಚಳುವಳಿಯ ಮುಖಂಡನಾಗಿದ್ದ ಜನರಲ್ ಟೊರ್ರಿಚೋಸ್ ರಾಷ್ಟ್ರೀಯ ರಕ್ಷಣಾಪಡೆಯ ದಂಡನಾಯಕನಾಗಿ ಉಳಿದುಕೊಂಡಿದ್ದರೂ, ಅಧ್ಯಕ್ಷೀಯ ಚುನಾವಣೆಯಲ್ಲಿ ತಾನು ಸ್ಪರ್ಧಿಸುವುದಿಲ್ಲವೆಂದು ಹೇಳಿಕೊಂಡಿದ್ದಾರೆ. ದೇಶದ ಸಾಮಾಜಿಕ ಸಾಧನೆಗಳು ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧಗಳಿಸಲಾದ ಯಶಸ್ಸನ್ನು ರಕ್ಷಿಸಿಕೊಳ್ಳಲಾಗುವುದೆಂದು ರಕ್ಷಣಾದಳದ ಮುಖಂಡರುಗಳೇ ಹೇಳಿಕೊಂಡಿದ್ದಾರೆ.

ಸಂಕಷ್ಟದ ಪರಿಸ್ಥಿತಿ:

ಅರ್ಜಂಟೀನಾದಲ್ಲಿ ಪ್ರಜಾಪ್ರಭುತ್ವವಾದಿಗಳು ಮತ್ತು ದೇಶಪ್ರೇಮಿಗಳು ಒಗ್ಗಟ್ಟಿಗಾಗಿ ಮತ್ತು ಸಹಕಾರಕ್ಕಾಗಿ ನಡೆಸುತ್ತಿರುವ ಪ್ರಯತ್ನಗಳು ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿ ಮುನ್ನಡೆಯುತ್ತಿವೆ. 1976ರ ಮಾರ್ಚ್ ತಿಂಗಳಲ್ಲಿ ಸೈನ್ಯಾಡಳಿತ ಬಂದಮೇಲೆ ಸಾಮ್ರಾಜ್ಯಶಾಹಿಗಳ ಬಾಲಬಡುಕರು ಚಿಲಿಯಂತೆಯೇ ಇಲ್ಲೂ ಕ್ಷಿಪ್ರಕ್ರಾಂತಿ ನಡೆಸುವ ಪರಿಸ್ಥಿತಿಯನ್ನು ನಿರ್ಮಿಸತೊಡಗಿವೆ. ಈ ಉದ್ದೇಶಕ್ಕಾಗಿ ಸೈನ್ಯದೊಳಗಡೆ ಸ್ಥಳೀಯ ಏಕಸ್ವಾಮ್ಯವಾದಿಗಳು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಬೆಂಬಲಿಗರಾದ ಬಲಪಂಥೀಯರನ್ನು ತುಂಬಿಸುವ ಮೂಲಕ ಸೈನ್ಯದೊಳಗಿನ ಶಕ್ತಿಸಮತೋಲನವನ್ನು ಹೆಚ್ಚು ಕಡಿಮೆ ಮಾಡಲಾಗುತ್ತಿದೆ. ಹೀಗಿದ್ದರೂ ಪ್ರತಿಕ್ರಾಂತಿಯ ಪ್ರಯತ್ನಗಳಿಗೆ ದೇಶದಲ್ಲಿ ಪ್ರಬಲವಿರೋಧ ಕಾಣಿಸಲಾರಂಭಿಸಿದೆ. ಸೈನ್ಯದೊಳಗಿನ ಪ್ರಜಾಸತ್ತಾತ್ಮಕ ಮತ್ತು ದೇಶಪ್ರೇಮಿ ವಿಭಾಗವು ಎಲ್ಲ ಪ್ರಗತಿಪರ ಶಕ್ತಿಗಳೊಂದಿಗೂ ಮಾತುಕತೆ ನಡೆಸಬಯಸಿದೆ. ಅದು ಬಹುರಾಷ್ಟ್ರೀಯ ಸಂಸ್ಥೆಗಳನ್ನೂ ವಿರೋಧಿಸುತ್ತಿದೆ. ದೇಶದ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಸಾರ್ವಜನಿಕ ಕ್ಷೇತ್ರವನ್ನು ಸುದೃಢಗೊಳಿಸಿದ ಜನರಲ್ ಮೊಸ್ಕೊನಿ, ಬಾಲ್ಡಿಚ್ ಮತ್ತು ಸವಿಯೋ ಅವರಂತಹ ಮಹಾನ್ ದೇಶಪ್ರೇಮಿಗಳು ಸಾಗಿದ ಜಾಡಿನಲ್ಲೇ ಇವೂ ಸಾಗಬಯಸಿವೆ. ದೇಶದ ಹಿತವನ್ನು ಕಾಪಾಡುವ ಸೈನ್ಯಕ್ಕೆ ಜನತೆಯ ಬೆಂಬಲವಿದ್ದರೆ ಮಾತ್ರ ಅದು ಸಮರ್ಥವಾಗಿ ಕಾರ್ಯನಿರ್ವಹಿಸಬಲ್ಲದೆಂದು ಈ ದೇಶಪ್ರೇಮಿಗಳು ತಿಳಿದಿದ್ದಾರೆ. ಅರ್ಜೆಂಟೀನಾದ ಸೈನ್ಯ ಮತ್ತು ರಾಜಕೀಯ ಪತ್ರಿಕೆ "ಎಸ್ಟ್ರಟೀಜಿಯಾ"ಕೂಡಾ ಇಂಥದೇ ವಾದವನ್ನು ಬೆಂಬಲಿಸಿವೆ. "ಅರ್ಜೆಂಟೀನಾದ ಆರ್ಥಿಕಸ್ವಾತಂತ್ರ್ಯಕ್ಕೆ ಬಹುರಾಷ್ಟ್ರೀಯ ಸಂಸ್ಥೆಗಳಿಂದಲೂ ದೇಶದೊಳಗೆ ಪಂಚಮದಳಗಳಂತೆ ಕಾರ್ಯನಿರ್ವಹಿಸುವ ಅವುಗಳ ಮಿತ್ರರಿಂದಲೂ ಅಪಾಯವಿದೆ" ಎಂದು ಈ ಪತ್ರಿಕೆಯ ಪ್ರಧಾನ ಸಂಪಾದಕ ಡಿವಿಜನಲ್ ಜುವಾನ್ ಗುಗ್ಲಿಯಾಲ್‌ಮೆಲ್ಲಿ ತನ್ನ ಆರ್ಥಿಕತೆ, ಸೈನಿಕ ಶಕ್ತಿ ಮತ್ತು ರಾಷ್ಟ್ರೀಯ ಭದ್ರತೆ' ಎಂಬ ಲೇಖನದಲ್ಲಿ (ಮಾರ್ಚ್, ಏಪ್ರಿಲ್, 1978ರ ಸಂಚಿಕೆ) ಬರೆದಿದ್ದಾರೆ.

ಕೊಲಂಬಿಯಾದಲ್ಲಿ ಹೋರಾಟ :

ಪ್ರಾತಿನಿಧಿಕ ಪ್ರಜಾಪ್ರಭುತ್ವವೆಂದೆನ್ನಲಾದ ಆಳ್ವಿಕೆಗಳಿರುವ ದೇಶಗಳಲ್ಲೂ ಪ್ರಜಾಸತ್ತೆ ಮತ್ತು ಪ್ರಗತಿಗಾಗಿ ಬಲವಾದ ಹೋರಾಟಗಳು ನಡೆಯುತ್ತಿವೆ. ಸ್ಥಳೀಯ ಏಕಸ್ವಾಮ್ಯವಾದಿ ಬಂಡವಾಳಶಾಹಿಗಳ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಹಿತಾಸಕ್ತಿಯನ್ನು ಬಯಸುವ ಪ್ರತಿಗಾಮಿಗಳು ತಮ್ಮ ಶೋಷಕ ವ್ಯವಸ್ಥೆಯನ್ನು ಆಧುನೀಕರಣಗೊಳಿಸಬಲ್ಲ ರಾಜಕೀಯ ಆಡಳಿತೆಯನ್ನೂ ಮತ್ತು ಆ ಮೂಲಕ ಸರಕಾರಿ ಏಕಸ್ವಾಮ್ಯವಾದಿ ಬಂಡವಾಳಶಾಹಿ ವ್ಯವಸ್ಥೆಯ ನಿರ್ಮಾಣವನ್ನು ಬಯಸುತ್ತಿದ್ದಾರೆ. ಅವರು ನಿರಂಕುಶಾಧಿಕಾರವೇ ಅತ್ಯಂತ ಸಮರ್ಪಕವಾದ 'ಮಾದರಿ' ರಾಜಕೀಯ ವ್ಯವಸ್ಥೆಯೆಂದು ತಿಳಿದಿದ್ದಾರೆ. ಉದಾಹರಣೆಗೆ ಕೊಲಂಬಿಯಾದಲ್ಲಿ ಅಂತರಾಷ್ಟ್ರೀಯ ಏಕಸ್ವಾಮ್ಯವಾದಿಗಳೊಂದಿಗೆ ಸಂಬಂಧ ಹೊಂದಿರುವ ದೊಡ್ಡ ಬಂಡವಾಳಶಾಹಿ ವರ್ಗಗಳು ಪ್ರಜಾಸತ್ತಾತ್ಮಕ ಚಳುವಳಿ ಮತ್ತು ದುಡಿಯುವ ಜನತೆಯ ವಿರುದ್ಧ ಅತ್ಯಂತ ಆಕ್ರಮಣಕಾರಿ ನಿಲುವನ್ನು ತಳೆದಿವೆ. ಈಗಿರುವ ಸಂವಿಧಾನವನ್ನು ಮರುಪರಿಶೀಲನೆಗೊಳಪಡಿಸಬೇಕೆಂದೂ ಅಥವಾ ಅದನ್ನು ರದ್ದುಪಡಿಸಬೇಕೆಂದೂ ಪ್ರಜಾಪ್ರಭುತ್ವ ವಿರೋಧಿ ಮತ್ತು ದಮನಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಅವು ಒತ್ತಾಯಿಸುತ್ತಿವೆ.

ದೇಶವು ಸದಾಕಾಲ ಯುದ್ಧದ ಪರಿಸ್ಥಿತಿಯಲ್ಲಿರುವುದು ಪ್ರತಿಗಾಮಿಗಳ ಚಟುವಟಿಕೆಗೆ ಉತ್ತಮ ಅವಕಾಶಗಳನ್ನು ಒದಗಿಸುತ್ತದೆ ಮತ್ತು ಸೈನ್ಯದ ನಾಯಕತ್ವದಲ್ಲಿರುವ ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳನ್ನು ಒಂದುಗೂಡಿಸಲು ನೆರವಾಗುತ್ತದೆ. ಸೆಪ್ಟೆಂಬರ್, 1977ರ ಸಾರ್ವತ್ರಿಕ ಮುಷ್ಕರದ ನಂತರವಂತೂ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ದುಡಿಯುವ ಜನತೆಯ ಸ್ವಾತಂತ್ರ್ಯದ ಮೇಲೆ ಆಕ್ರಮಣಗೈಯುವ ಅವುಗಳ ಪ್ರವೃತ್ತಿಗೆ ಸಾಕಷ್ಟು ವಿಪುಲ ಅವಕಾಶ ಲಭಿಸಿದೆ. ಪ್ರಜಾಸತ್ತಾತ್ಮಕ ಶಕ್ತಿಗಳ ಬೆಂಬಲ ಪಡೆದಿದ್ದ ಕಾರ್ಮಿಕರ ಈ ಪ್ರತಿಭಟನೆ ಪ್ರತಿಗಾಮಿಗಳಿಂದ ಕ್ರೂರ ವಿರೋಧವನ್ನೆದುರಿಸಬೇಕಾಯಿತು. ಆದರೂ ಸಶಸ್ತ್ರ ಪಡೆಗಳ ಮನೋಭಾವವನ್ನು ಸರಿಯಾದ ರೀತಿಯಲ್ಲಿ ಗುರುತಿಸಿಕೊಳ್ಳಲು ಈ ಮುಷ್ಕರದಿಂದಾಗಿ ಸಾಧ್ಯವಾಯಿತು. ಸೈನ್ಯದ ಒಂದು ವಿಭಾಗ ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸಲು ಮುಂದಾಗಿದ್ದರೂ ಅನೇಕ ಅಧಿಕಾರಿಗಳು ಕಾರ್ಮಿಕರ ಹೋರಾಟವನ್ನು ಬಗ್ಗುಬಡಿಯುವಂತೆ ತಮ್ಮ ಘಟಕಗಳಿಗೆ ಆಜ್ಞೆ ನೀಡಲು ಒಪ್ಪಲಿಲ್ಲ.

1977ರಲ್ಲಿ ಸೈನ್ಯದ ಪ್ರತಿಗಾಮಿ ನಾಯಕರು ಪ್ರಜಾಸತ್ತಾತ್ಮಕ ಚಳುವಳಿಯ ಮುಖಂಡರನ್ನು ಕಟುವಾಗಿ ಟೀಕಿಸಿದ್ದ ಮನವಿಯೊಂದನ್ನು ರಾಷ್ಟ್ರಾಧ್ಯಕ್ಷರಿಗೆ ನೀಡಿದ್ದರು. ವಿರೋಧ ಪಕ್ಷಗಳು ಸೈನ್ಯದ ಪ್ರತಿಷ್ಠೆಯನ್ನು ಕುಗ್ಗಿಸುವಂತಹ ಮತ್ತು ಸೈನಿಕರ ಒಗ್ಗಟ್ಟನ್ನು ಕೆಡಿಸುವಂತಹ ಕೃತ್ಯದಲ್ಲಿ ನಿರತರಾಗಿದ್ದಾರೆಂದೂ ಇದರಲ್ಲಿ ಆಪಾದಿಸಲಾಗಿತ್ತು. ಪ್ರಜೆಗಳ 'ಭದ್ರತೆ'ಯನ್ನು ಕಾಯ್ದುಕೊಳ್ಳಲು ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಇದರಲ್ಲಿ ಕೇಳಿಕೊಳ್ಳಲಾಗಿತ್ತು. ಕೊಲಂಬಿಯಾದಲ್ಲಿ ಜಾರಿಗೊಳಿಸಲಾದ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯವನ್ನು ಮೆಟ್ಟಿಹಾಕುವಂತಹ ಡಿಕ್ರಿ ನಂ. 1923 (ಭದ್ರತಾ ಕಾಯ್ದೆ) ದೇಶದ ಸಮಸ್ತ ಪ್ರಜಾಪ್ರಭುತ್ವ ಪ್ರೇಮಿಗಳನ್ನು ದಂಗುಬಡಿಸಿದೆ. ಈ ಕಾನೂನನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳೂ, ಹೆಸರಾಂತ ನ್ಯಾಯವಾದಿಗಳೂ ಧಾರ್ಮಿಕ ಮುಖಂಡರೂ ಮತ್ತು ಟ್ರೇಡ್‌ಯೂನಿಯನ್‌ಗಳು ತೀಕ್ಷ್ಣವಾಗಿ ಖಂಡಿಸಿದ್ದಾರೆ.

ಎಡೆಬಿಡದ ಹೋರಾಟ:

ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಪ್ರಾತಿನಿಧಿಕ ಸಮಾವೇಶವೊಂದು 1979ರ ಮಾರ್ಚ್ 30, ಮತ್ತು ಏಪ್ರಿಲ್ 1 ರಂದು ಬೊಗೊಟಾದಲ್ಲಿ ನಡೆಯಿತು. ಈ ಸಮಾವೇಶದ ಕೊನೆಗೆ ನೀಡಲಾದ ಹೇಳಿಕೆಯಲ್ಲಿ ಅದರ ಪ್ರತಿನಿಧಿಗಳು ಭಯೋತ್ಪಾದಕ ಧೋರಣೆಗಳನ್ನು ಖಂಡಿಸಿದ್ದಾರೆ. ದೇಶದ ಜನತೆ ಇನ್ನೂ ಬಡತನಕ್ಕಿಳಿಯುತ್ತಿದ್ದಾರೆಂದೂ ಕೆಲವೇ ವ್ಯಕ್ತಿಗಳ ಸಂಪತ್ತು ಮಾತ್ರ ವೃದ್ಧಿಸಿದೆಯೆಂದೂ, ಏಕಸ್ವಾಮ್ಯವಾದಿ ಬಂಡವಾಳದ ಕೇಂದ್ರೀಕರಣವು ಸಾಮಾಜಿಕ ಉದ್ರಿಕ್ತತೆಯನ್ನು ನಿರ್ಮಿಸುತ್ತಿದೆಯೆಂದೂ ಈ ಸಮಾವೇಶದಲ್ಲಿ ಭಾಗವಹಿಸಿದವರು ಹೇಳಿಕೆ ನೀಡಿದ್ದಾರೆ. ಇದಕ್ಕಾಗಿಯೇ ದೇಶದ ಪುರೋಗಾಮಿಗಳು ಪ್ರಜಾಸತ್ತಾತ್ಮಕ ಸ್ವಾತಂತ್ರ್ಯಕ್ಕಾಗಿ ಮಾತ್ರವಲ್ಲ, ಅವುಗಳನ್ನು ವ್ಯಾಪಕಗೊಳಿಸಲೂ ಪ್ರಜಾತಾಂತ್ರೀಕರಣದ ಕಾರ್ಯಕ್ರಮವನ್ನು ವಿಸ್ತೃತಗೊಳಿಸಲೂ ಎಡೆಬಿಡದೆ ಹೋರಾಟ ನಡೆಸುತ್ತಿದ್ದಾರೆ.

ಇತ್ತೀಚೆಗೆ ಪ್ರಬಲಗೊಳ್ಳುತ್ತಿರುವ ಮೆಕ್ಸಿಕೋದ ಪ್ರಜಾಸತ್ತಾತ್ಮಕ ಚಳುವಳಿ ಕೂಡಾ ಇದನ್ನೇ ಸೂಚಿಸುತ್ತಿದೆ. ಈ ದೇಶದಲ್ಲಿ ಕೈಗೊಳ್ಳಲಾದ ಕೆಲವು ಸುಧಾರಣೆಗಳು ಕಮ್ಯುನಿಸ್ಟ್ ಪಕ್ಷ ಮತ್ತಿತರ ಎಡ ಸಂಘಟನೆಗಳಿಗೆ ತಮ್ಮ ಚಟುವಟಿಕೆ ನಡೆಸಲು ವಿಸ್ತೃತ ಅವಕಾಶಗಳನ್ನು ನೀಡಿವೆ ಮತ್ತು ಅವುಗಳಿಗೆ ಚುನಾವಣೆಯಲ್ಲಿ ಭಾಗವಹಿಸುವ ಸಾಂವಿಧಾನಿಕ ಹಕ್ಕನ್ನೂ ಕೊಡಲಾಗಿದೆ.

ಚುನಾವಣೆಯಲ್ಲಿ ಪುರೋಗಾಮಿಗಳು ಭಾಗವಹಿಸುವುದರಿಂದ ಅಥವಾ ನಿರ್ದಿಷ್ಟ ಪ್ರಜಾಸತ್ತಾತ್ಮಕ ಬೇಡಿಕೆಗಳಿಗಾಗಿ ಹೋರಾಡುವುದರಿಂದ ಎಲ್ಲವೂ ಸಾಧಿಸಲ್ಪಡುವುದೆಂದಲ್ಲ. ಈ ಮೂಲಕ ಅವರು ಪ್ರಜಾಸತ್ತಾತ್ಮಕ ಮತ್ತು ಏಕಸ್ವಾಮ್ಯ ವಿರೋಧಿ ಸುಧಾ

ರಣೆಗಳನ್ನು ವ್ಯಾಪಕಗೊಳಿಸಲು ಹೆಣಗಾಡುತ್ತಾರೆ. ದೇಶದ ನೈಸರ್ಗಿಕ ಸಂಪತ್ತನ್ನು ಸಾಮ್ರಾಜ್ಯಶಾಹಿಗಳು ಕೊಳ್ಳೆಹೊಡೆಯುತ್ತಿರುವುದನ್ನು ತಪ್ಪಿಸಿ ಅದನ್ನು ಜನತೆಯ ಕೈಗೆ ಮರಳಿಸಿ ಕೊಡುವುದೇ ಇಲ್ಲಿ ಬಹುಮುಖ್ಯವಾದ ಅಂಶ.

ರಾಷ್ಟ್ರೀಕರಣ ಕಾರ್ಯಕ್ರಮಗಳು:

ಲ್ಯಾಟಿನ್ ಅಮೇರಿಕಾದ ಅನೇಕ ರಾಷ್ಟ್ರಗಳಲ್ಲಿ ಪ್ರಾಕೃತಿಕ ಸಂಪನ್ಮೂಲಗಳನ್ನು ಸಂರಕ್ಷಿಸುವ ಮತ್ತು ವಿದೇಶೀ ಏಕಸ್ವಾಮ್ಯ ಸಂಸ್ಥೆಗಳನ್ನು ರಾಷ್ಟ್ರೀಕರಿಸುವ ಹೆಜ್ಜೆಗಳನ್ನು ಕೈಗೊಳ್ಳಲಾಗಿದೆ. ಇವೆಲ್ಲ ಸಂಪೂರ್ಣವಾಗಿ ಸಾಮ್ರಾಜ್ಯಶಾಹಿ ವಿರೋಧಿ ಕ್ರಮಗಳೆಂದೇನೂ ಹೇಳಲು ಸಾಧ್ಯವಿಲ್ಲ. ವಿದೇಶೀ ಏಕಸ್ವಾಮ್ಯವಾದಿಗಳು ಎಲ್ಲೆಡೆ ಹರಡಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಇಂತಹ ಕ್ರಮಗಳು ಲ್ಯಾಟಿನ್ ಅಮೇರಿಕಾದ ಬಂಡವಾಳಶಾಹಿಗಳಿಗೆ ತಮ್ಮ ಸ್ಪರ್ಧಾಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸಹಾಯಕವಾಗಬಹುದು. ಆದರೂ ಯಾವುದೇ ರಾಷ್ಟ್ರದ ಆಳುವ ವರ್ಗಗಳು ಕೈಗೊಳ್ಳುವ ಇಂತಹ ಕ್ರಮಗಳು ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಿಕೊಳ್ಳಲು ನಡೆಸಲಾಗುತ್ತಿರುವ ಚಳುವಳಿಗೆ ಸಹಾಯಕವಾಗುತ್ತವೆ. ಇವು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಉತ್ತೇಜನ ನೀಡಬಹುದು, ಜನತೆಯ ರಾಜಕೀಯ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಪ್ರಜ್ಞೆಯನ್ನು ಬೆಳೆಸಿ ಅವರನ್ನು ಒಂದುಗೂಡಿಸಲೂ ನೆರವಾಗಬಹುದು.

ಹವಾನಾದಲ್ಲಿ ಜರಗಿದ ಲ್ಯಾಟಿನ್ ಅಮೇರಿಕನ್ ಮತ್ತು ಕೆರಿಬಿಯನ್ ಬೇಸಿನ್ ರಾಷ್ಟ್ರಗಳ ಕಮ್ಯುನಿಸ್ಟ್ ಪಕ್ಷಗಳ ಸಭೆಯಲ್ಲಿ ಅಂಗೀಕರಿಸಲಾದ ಘೋಷಣೆ ಪ್ರಾಕೃತಿಕ ಸಂಪನ್ಮೂಲಗಳನ್ನು ಸಂರಕ್ಷಿಸುವ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಆಳ್ವಿಕೆಯನ್ನು ಮಿತಗೊಳಿಸುವ ಸಂಕಾರಗಳನ್ನು ಬೆಂಬಲಿಸಲು ಕಮ್ಯುನಿಸ್ಟ್ ಪಕ್ಷಗಳು ಬದ್ಧವಾಗಿರುವುದನ್ನು ತೋರಿಸಿದೆ. "ರಾಷ್ಟ್ರೀಯ ಅರ್ಥವ್ಯವಸ್ಥೆಯನ್ನು ಸಂರಕ್ಷಿಸಿಕೊಳ್ಳುವ ಕ್ರಮಗಳ ಜೊತೆಗೆ ಯಾವಾಗಲೂ ಸಾಮ್ರಾಜ್ಯಶಾಹಿ ವಿರೋಧಿ ಧೋರಣೆಯೂ ಅನುಷ್ಠಾನಗೊಳ್ಳುತ್ತದೆ ಎನ್ನಲು ಸಾಧ್ಯವಿಲ್ಲ. ಇವು ಬೂರ್ಶ್ವಾ ರಾಷ್ಟ್ರೀಯವಾದದಿಂದಲೂ ಪ್ರೇರಿತವಾಗಿರಬಹುದು."

"ರಾಷ್ಟ್ರೀಯವಾದಿಗಳು ಸಾಮ್ರಾಜ್ಯಶಾಹಿ ವಿರೋಧಿಗಳಾಗಿ ಪರಿವರ್ತನೆ ಹೊಂದುವುವೂ ಕ್ರಾಂತಿಕಾರಿ ನಿಲುವುಗಳನ್ನು ಅಂಗೀಕರಿಸುವುದೂ ಸಾಧ್ಯ. ಆದರೆ ಅದು ಸಾಮುದಾಯಿಕ ಶಕ್ತಿಗಳು ಅದೆಷ್ಟು ನಿರ್ಧಾರಾತ್ಮಕವಾಗಿ ತಮ್ಮ ಚಳುವಳಿಯನ್ನು ನಡೆಸುತ್ತಿವೆ ಮತ್ತು ರಾಷ್ಟ್ರೀಯವಾದಿ ಸರಕಾರಗಳ ಹಾಗೂ ಸಾಮ್ರಾಜ್ಯಶಾಹಿಗಳ ನಡುವೆ ಎಂತಹ ಪ್ರಮಾಣದ ವೈರುಧ್ಯಗಳಿವೆ ಎಂಬುದನ್ನು ಅವಲಂಬಿಸಿದೆ."

ಇತ್ತೀಚೆಗೆ ಮೆಕ್ಸಿಕೋದಲ್ಲಿ ಸಂಶೋಧಿಸಲ್ಪಟ್ಟಿರುವ ಅಪಾರ ತೈಲ ಸಂಪತ್ತು ಅಮೇರಿಕಾ ಮತ್ತು ಮೆಕ್ಸಿಕೋ ನಡುವಣ ಸಂಬಂಧದಲ್ಲಿ ನಿರ್ಣಾಯಕ ಪಾತ್ರವಹಿಸುತ್ತಿದೆ. 1979ರ ಫೆಬ್ರುವರಿಯಲ್ಲಿ ಅಮೇರಿಕದ ಅಧ್ಯಕ್ಷ ಕಾರ್ಟರ್ ಮೆಕ್ಸಿಕೋಗೆ ಅಧಿಕೃತ ಸಂದರ್ಶನ ನೀಡಿದ ವೇಳೆ ಯು. ಎಸ್. ನ್ಯೂಸ್ ಎಂಡ್ ವರ್ಲ್ಡ್ ರಿಪೋರ್ಟ್ ಪತ್ರಿಕೆ "ಮೆಕ್ಸಿಕೋದ ತೈಲವು ಅಮೇರಿಕದ ಪಾಲಿಗೆ ತುಂಬಾ ರಾಜಕೀಯ ಮಹತ್ವವುಳ್ಳದ್ದಾಗಿದೆ" ಎಂದಿದೆ. ಈ ಸಂಬಂಧ ನಡೆದ ಮಾತುಕತೆಗಳಲ್ಲಿ ಮೆಕ್ಸಿಕೋ ತನ್ನ ಸ್ವತಂತ್ರ ನಿಲುಮೆಯನ್ನು ತೋರ್ಪಡಿಸಿದೆಯಲ್ಲದೆ ತಾನು ಅಮೇರಿಕಾದ ಬಡ ಸಂಬಂಧಿ ಅಲ್ಲವೆಂಬುದನ್ನೂ ಸ್ಪಷ್ಟಪಡಿಸಿಕೊಂಡಿದೆ. ಅಧ್ಯಕ್ಷ ಲೋಪೆಜ್ ಪೋರ್ಟಿಲ್ಲೋ ಅವರು ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ತಳೆದ ನಿಲುಮೆಯನ್ನೂ, ತಾನು ರಾಷ್ಟ್ರೀಯ ಶಕ್ತಿ ನೀತಿಯ ಬಗ್ಗೆ ಸ್ವತಂತ್ರ ನಿಲುಮೆಯನ್ನು ತಳೆದಿರುವೆನೆಂದು ಅವರು ಹೇಳಿಕೊಂಡಿರುವುದನ್ನೂ ಪ್ರಜಾಸತ್ತಾತ್ಮಕ ಶಕ್ತಿಗಳು ಬೆಂಬಲಿಸಿವೆ. ರಾಷ್ಟ್ರದ ನೈಸರ್ಗಿಕ ಸಂಪತ್ತು ತಮ್ಮ ದೇಶದ ಸ್ವತಂತ್ರ ಆರ್ಥಿಕ ಅಭಿವೃದ್ಧಿಗಾಗಿ, ಸಾಮಾಜಿಕ ಪ್ರಗತಿ ಮತ್ತು ಜನರ ಜೀವನ ಮಟ್ಟದ ಸುಧಾರಣೆಗಾಗಿ ಬಳಸಲ್ಪಡಬೇಕೆಂದೂ ಅವು ಬಯಸಿವೆ ಹೀಗೆ ಪ್ರಜಾಸತ್ತೆಗಾಗಿ ನಡೆಯುತ್ತಿರುವ ಹೋರಾಟವು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ನಡೆಸುವ ಚಳುವಳಿಯ ಅವಿಭಾಜ್ಯ ಅಂಗವೇ ಆಗುತ್ತಿದೆ.

ಕೆರಿಬಿಯನ್ ರಾಷ್ಟ್ರಗಳ ಜನತೆಯ ಹೋರಾಟಗಳೂ ಪಶ್ಚಿಮಾರ್ಧಗೋಲದ ವಿಮೋಚನಾ ಚಳುವಳಿಯಲ್ಲಿ ಪ್ರಮುಖ ಸ್ಥಾನವನ್ನು ಪಡೆಯುತ್ತಿವೆ. ಹಲವು ಹೊಸ ಸ್ವತಂತ್ರ ರಾಷ್ಟ್ರಗಳು ಉದಯವಾಗುತ್ತಿರುವುದು ಈ ಪ್ರದೇಶದಲ್ಲಿ ವಸಾಹತುಶಾಹಿ ನಿರ್ಮೂಲವಾಗುತ್ತಿರುವುದರ ಲಕ್ಷಣ. ಪ್ರಾಯಶಃ ವಸಾಹತುಶಾಹಿಯ ಪಳೆಯುಳಿಕೆಯಾಗಿ ಈ ಪ್ರದೇಶದಲ್ಲಿ ಉಳಿದುಕೊಂಡಿರುವುದು ಪ್ಯೂರ್ಟೋರೀಕೋ ಒಂದೇ.

ಅಭಿವೃದ್ಧಿಯ ಮಾರ್ಗಗಳು :

ಸ್ವಾತಂತ್ರ್ಯಗಳಿಸಿದ ಮೇಲೆ ಕೆರಿಬಿಯನ್ ರಾಷ್ಟ್ರಗಳು ತಮ್ಮ ಅಭಿವೃದ್ಧಿಗಾಗಿ ಯಾವ ಮಾರ್ಗ ಅವಲಂಬಿಸಬೇಕೆನ್ನುವುದರ ಕುರಿತು ಅಲ್ಲಿ ತೀವ್ರವಾದ ಈ ಸಂಘರ್ಷ ನಡೆಯುತ್ತಿದೆ. ಬೇರೆ ಬೇರೆ ಪಕ್ಷಗಳ ಅಸ್ತಿತ್ವ, ಸಾಮಾಜಿಕ ಅಭಿವೃದ್ಧಿಯ ಬೇರೆ ಬೇರೆ ಮಾರ್ಗಗಳನ್ನು ಜನತೆಯ ಮುಂದಿರಿಸಲಾಗುತ್ತಿರುವುದು, ಮತ್ತು ಕೊನೆಯದಾಗಿ ತೀವ್ರವಾಗುತ್ತಿರುವ ಸಾಮಾಜಿಕ ಸಂಘರ್ಷಗಳು ಹಾಗೂ ವಿವಿಧ ಪಕ್ಷ ಮತ್ತು ಗುಂಪುಗಳ ನಡುವಣ ವೈರುಧ್ಯಗಳಲ್ಲಿ ಇದು ಪ್ರತಿಬಿಂಬಿತವಾಗುತ್ತಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪ. ಅದು ತನಗೆ ಇಷ್ಟವಿಲ್ಲದ ಆಳ್ವಿಕೆಗಳನ್ನು ಬುಡಮೇಲು ಮಾಡುತ್ತಿರುವುದು ಮತ್ತು ಸ್ಥಳೀಯ ಸ್ವಾಮ್ಯವರ್ಗ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮಾತ್ರ ಅನುಕೂಲವಾಗಬಲ್ಲ, "ಮಾದರಿ" ವ್ಯವಸ್ಥೆಗಳನ್ನು ಆ ದೇಶಗಳ ಮೇಲೆ ಹೇರುವ ಅಮೇರಿಕಾದ ಪ್ರಯತ್ನಗಳಿಂದಾಗಿ ಇಂತಹ ಸಂಘರ್ಷಗಳು ಇನ್ನಷ್ಟು ಉತ್ಕಟಗೊಳ್ಳುತ್ತಿವೆ.

ಕೆರಿಬಿಯನ್ ಬೇಸಿನ್‌ನ ಯಾವುದೇ ಭಾಗದಲ್ಲಾದರೂ ತನಗೆ ಪ್ರತಿಕೂಲವಾದ ಯಾವುದೇ ಶಕ್ತಿ ತಲೆಯೆತ್ತದಂತೆ ನೋಡಿಕೊಳ್ಳಲು ಅಮೇರಿಕಾ ಅಲ್ಲಿ ಹಸ್ತಕ್ಷೇಪ ನಡೆಸುತ್ತಿದೆಯೆಂದು ಈ ಪ್ರದೇಶದಲ್ಲಿ ಯು.ಎಸ್.ಎ.ಗೆ ಇರುವ ಹಿತಾಸಕ್ತಿಗಳ ಕುರಿತು ಸಮೀಕ್ಷೆ ನಡೆಸಿರುವ ಉತ್ತರ ಅಮೇರಿಕಾದ ಬರಹಗಾರರು ಬರೆದಿದ್ದಾರೆ. ಕೆರಿಬಿಯನ್ ಬೇಸಿನ್‌ನಲ್ಲಿ ನಡೆಯುತ್ತಿರುವ ವಿಮೋಚನಾ ಚಳುವಳಿಗಳ ಯಶಸ್ಸಿಗೆ ಸಮಾಜವಾದಿ ರಾಷ್ಟ್ರಗಳೊಂದಿಗೆ ಮುಖ್ಯವಾಗಿ ಕ್ಯೂಬಾದೊಂದಿಗೆ ಅವು ಹೊಂದಿರುವ ಸಹಕಾರವೇ ಕಾರಣ. ಲ್ಯಾಟಿನ್ ಅಮೇರಿಕಾದ ದೇಶಗಳ ಸಾಮಾಜಿಕ ಪ್ರಗತಿ ಮತ್ತು ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯಗಳಿಗೆ ಕ್ಯೂಬಾ ಒಂದು ದಾರಿದೀಪವಾಗಿದೆ. ತಮ್ಮ ರಾಷ್ಟ್ರಗಳು ಯು.ಎಸ್.ಎ.ಗೆ ಭೌಗೋಳಿಕವಾಗಿ ಸಮೀಪವಾಗಿರುವುದರಿಂದ ಅವು ಸದಾಕಾಲ ಅಮೇರಿಕಾದ ಅಂಕೆಗೆ ಒಳಪಟ್ಟೇ ಇರಬೇಕೆಂಬ ಭಾವನೆ ಲ್ಯಾಟಿನ್ ಅಮೇರಿಕಾದ ಜನರಿಂದ ತೊಲಗಿಹೋಗಿದೆ" ಎಂದು ವೆನೆಜುವೆಲಾದ ಪತ್ರಕರ್ತರಾದ ಡೊಮಿಟ್ಟಿಯೋ ಬೋರ್ಸನರ್ ಹೇಳಿದ್ದಾರೆ.

ಭಿನ್ನ ಭಿನ್ನ ಪ್ರಕಾರಗಳು :

ಈ ಖಂಡದಲ್ಲಿ ನಡೆಯುತ್ತಿರುವ ಬದಲಾವಣೆಗಳ ಕುರಿತು ಕೊಲಂಬಿಯಾದ ಪತ್ರಿಕೆ 'ಪೋಜ್ ಪ್ರೊಲೆಟಾರಿಯಾ' ಹೀಗೆಂದಿದೆ. "ಪುನರುತ್ಥಾನ ಮತ್ತು ಬದಲಾವಣೆಯ ಕುರಿತು ಜನತೆಗಿರುವ ಬಲವಾದ ಒಲವನ್ನು ಪ್ರತಿಬಿಂಬಿಸುವಂತಹ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗಳು ಲ್ಯಾಟಿನ್ ಅಮೇರಿಕಾದಲ್ಲಿ ಕಾಣಿಸಿಕೊಳ್ಳುತ್ತಿವೆ. ಕ್ರೂರ ಸರ್ವಾಧಿಕಾರಿಗಳಿದ್ದರೂ, ನಿರಂಕುಶಾಧಿಕಾರಿ ಆಡಳಿತ ಇದ್ದಾಗಲೂ ಜನತೆಯ ಹೋರಾಟ ನಿರಂತರ ಮುಂದುವರಿಯುತ್ತಿದೆ. ಶತಮಾನಗಳಿಂದಿರುವ ಸಮಸ್ಯೆಗಳಿಗೆ ಪರಿಣಾಮಕಾರಿ ಹಾಗೂ ಫಲಪ್ರದ ಪರಿಹಾರಗಳನ್ನು ಕಂಡುಕೊಳ್ಳಲು ಈ ಖಂಡದಲ್ಲೆಲ್ಲ ಹುಡುಕಾಟ ನಡೆಯುತ್ತಿದೆ.

ಈ ಪ್ರದೇಶದ ಸಾಮುದಾಯಿಕ ಹೋರಾಟಗಳು-ಚಿಲಿಯಲ್ಲಿ ಮುಷ್ಕರಗಳು ಮತ್ತು ವಿದ್ಯಾರ್ಥಿಗಳ ಪ್ರತಿಭಟನೆ. ಉರುಗ್ವೆಯ ದೇಶಭಕ್ತರ ಭೂಗತ ಚಳುವಳಿ, ಸಾಲ್ವಡೋರ್‌ನಲ್ಲಿ ಸಾಮುದಾಯಿಕ ಆಂದೋಲನ, ಪನಾಮಾ ಕಾಲುವೆ ವಲಯದ ಮೇಲೆ ಸಂಪೂರ್ಣ ಸಾರ್ವಭೌಮತ್ವದ ಬೇಡಿಕೆ ಮತ್ತು ಮೆಕ್ಸಿಕೋದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗಾಗಿ ಹೋರಾಟ-ಹೀಗೆ ಬೇರೆ ಬೇರೆ ಪ್ರಕಾರಗಳನ್ನು ತಳೆಯುತ್ತಿವೆ. ಸಾಮ್ರಾಜ್ಯವಾದಿಗಳು, ಸ್ಥಳೀಯ ಪ್ರತಿಗಾಮಿ ಸೈನಿಕ ಗುಂಪುಗಳು ಮತ್ತು ವಂಶಪರಂಪರಾಗತ ಆಳ್ವಿಕೆಗಳ ನೆರವಿನಿಂದ ನಡೆಸುತ್ತಿರುವ ಅಮಾನುಷ ದಬ್ಬಾಳಿಕೆಗೂ ಈ ಖಂಡದ ದೇಶಭಕ್ತರನ್ನೂ ಪ್ರಜಾಪ್ರಭುತ್ವವಾದಿಗಳನ್ನೂ ಮಣಿಸಲು ಸಾಧ್ಯವಾಗಿಲ್ಲ. ಹಾಗಾಗಿ ಲ್ಯಾಟಿನ್ ಅಮೇರಿಕಾದಲ್ಲಿ ಪ್ರಜಾಸತ್ತೆ ಮತ್ತು ಸಾಮಾಜಿಕ ವಿಮೋಚನೆಗಾಗಿ ನಡೆಯುವ ಹೋರಾಟ ದಿನೇದಿನೇ ಪ್ರಬಲವಾಗುತ್ತಿದೆ.

●

ರಿಕ್ಷಾ ಚಾಲಕರ ಮೇಲೆ ಪೋಲೀಸರ ದಬ್ಬಾಳಿಕೆ ವಿರುದ್ಧ ಯಶಸ್ವಿ ಹೋರಾಟ

ರಾಯಚೂರು ನಗರದಲ್ಲಿ ತಾ. 9-1-80ರಂದು ಇಬ್ಬರು ರಿಕ್ಷಾಚಾಲಕರನ್ನು ಹೊಡೆದು, ಗಾಯಗೊಳಿಸಿ, ಠಾಣೆಯಲ್ಲಿ ಇಟ್ಟಿದ್ದನ್ನು ಪ್ರತಿಭಟಿಸಿ ನೂರಾರು ರಿಕ್ಷಾ ಚಾಲಕರು ಸಿ.ಪಿ.ಐ. (ಎಂ) ಮುಖಂಡ ಕಾಂ. ಪುರುಷೋತ್ತಮರವರ ನೇತೃತ್ವದಲ್ಲಿ ಡಿ.ವೈ.ಎಸ್.ಪಿ.ಯವರನ್ನು ಕಂಡು ಸಂಬಂಧಪಟ್ಟ ಪೇದೆಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಕೇಳಲಾಗಿ, ಡಿ.ವೈ.ಎಸ್.ಪಿ.ಯವರು ಯಾವುದೇ ಭರವಸೆ ನೀಡಲು ನಿರಾಕರಿಸಿದರು. ತಾ. 10-1-80ರಂದು ಮುಂಜಾನೆ ಪರಿಸ್ಥಿತಿಯ ಅರಿವು ಮಾಡಿಕೊಡಲು ರಿಕ್ಷಾ ಚಾಲಕರೊಂದಿಗೆ ಕಾಂ. ಪುರುಷೋತ್ತಮ ಮಾತನಾಡುವಾಗ, ಸದರ್ ಬಜಾರ್ ಪೋಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಶ್ರೀ ಸರನಾಡಗೌಡ ಬಂದ ರಿಕ್ಷಾಚಾಲಕರನ್ನು ಸಂಘಟಿಸಬಾರದೆಂದು ಹೇಳಿದನು. ಇದರಿಂದ ರೊಚ್ಚಿಗೆದ್ದ ರಿಕ್ಷಾಚಾಲಕರು ಪೋಲೀಸರಿಗೆ ಧಿಕ್ಕಾರ ಎಂದು ಕೂಗಿದರು. ಮತ್ತೆ ಸರನಾಡಗೌಡರ ಆದೇಶದಂತೆ ನಾಲ್ಕು ಜನ ರಿಜರ್ವ್ ಪೋಲೀಸರು ಕೆಲವು ಜನ ರಿಕ್ಷಾಚಾಲಕರನ್ನು ಹಿಡಿದು ಠಾಣೆಯಲ್ಲಿ ಹಾಕಲಾಯಿತು. ಇವರನ್ನು ಬಿಡಿಸಿ ತರಲು ಕಾಂ. ಪುರುಷೋತ್ತಮ ಕಾಂ. ಚೌಧರಿಯವರು ನೂರಾರು ರಿಕ್ಷಾಚಾಲಕರನ್ನು ಕರೆದುಕೊಂಡು ಠಾಣೆಗೆ ಹೋಗಿ ಸಬ್ ಇನ್‌ಸ್ಪೆಕ್ಟರ್ ಜೊತೆ ಮಾತನಾಡುವಾಗ ರೇಗಿದ ಅಧಿಕಾರಿಗಳು ಕಾಂ. ಪುರುಷೋತ್ತಮ ಅವರನ್ನು ಹೊಡೆದು ಒಳಗೆ ಹಾಕಿದರು. ಏನೂ ತಿಳಿಯದ ಚಾಲಕರು ಮರಳಿ ಬಂದರು.

ವಿಷಯ ತಿಳಿದ ಕಾಂ.ಚಂದ್ರಶೇಖರ ಬಾಳೆಯವರು ಸಾವಿರಾರು ರಿಕ್ಷಾಚಾಲಕರನ್ನು ಸೇರಿಸಿ ಪೋಲೀಸರ ವಿರುದ್ಧ ಘೋಷಣೆ ಕೂಗುತ್ತಾ ಮೆರವಣಿಗೆಯಲ್ಲಿ ಠಾಣೆಗೆ ತೆರಳಿದರು. ಮಾರ್ಕ್ಸ್‌ವಾದಿಗಳ ಶಕ್ತಿಯನ್ನು ಕಂಡು ಹೆದರಿದ ಪೋಲೀಸರು, ನಗರದ ಎಲ್ಲಾ ಸಬ್ ಇನ್‌ಸ್ಪೆಕ್ಟರ್‌ಗಳು, ಸರ್ಕಲ್ ಇನ್‌ಸ್ಪೆಕ್ಟರ್‌ಗಳು ಹಾಗೂ ಡಿ. ವೈ. ಎಸ್. ಪಿ. ಯವರು ಠಾಣೆಯ ಬಳಿ ಹಾಜರಿದ್ದರು. ಸರನಾಡಗೌಡ ಕ್ಷಮೆ ಕೇಳಬೇಕೆಂದು ಪ್ರದರ್ಶನಕಾರರು ಕೂಗುತ್ತಿದ್ದರು.

ಪರಿಸ್ಥಿತಿಯನ್ನು ಅರಿತ ಡಿ ವೈ ಎಸ್. ಪಿ. ಹಾಗೂ ನಾಡಗೌಡರು ಕ್ಷಮೆ ಕೇಳಿ ಕಾಂ. ಪುರುಷೋತ್ತಮರನ್ನು ಬಿಟ್ಟಿದ್ದಲ್ಲದೆ, ಇನ್ನುಮುಂದೆ ಇಂತಹ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳುವುದಾಗಿ ನುಡಿದರು. ನಂತರ ಸರ್ವಸದಸ್ಯರ ಸಭೆ ನಡೆದು ತಾ. 14-1-80ರಂದು ಬೇಡಿಕೆ ದಿನಾಚರಣೆಯನ್ನು ಆಚರಿಸಲು ನಿರ್ಧರಿಸಲಾಯಿತು.

ತಾ.14ರಂದು ನಡೆದ ಪ್ರತಿಭಟನಾ ದಿನಾಚರಣೆಯಂದು ನಗರದ ನಾಗರೀಕರಿಗೆ ಹೊಸ ಅನುಭವ. ಎರಡು ಸಾವಿರಕ್ಕೂ ಹೆಚ್ಚಿಗೆ ಸೇರಿದ್ದ ರಿಕ್ಷಾ ಚಾಲಕರು ಕೆಂಪುಬಾವುಟಗಳನ್ನು ಹಿಡಿದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಜಯವಾಗಲಿ. ಸಿ. ಐ. ಟಿ. ಯು ಜಿಂದಾಬಾದ್, ರಿಕ್ಷಾ ಚಾಲಕರ ಯೂನಿಯನ್ ಜಿಂದಾಬಾದ್ ಎಂದು ಘೋಷಣೆಗಳನ್ನು ಕೂಗುತ್ತಾ ನಗರದ ಪ್ರಮುಖ ಬೀದಿಗಳನ್ನು ಹಾದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ತಕ್ಷಣ ಕೆಲವು ಬೇಡಿಕೆಗಳನ್ನು ಈಡೇರಿಸಲು ಒಪ್ಪಿದ ಜಿಲ್ಲಾಧಿಕಾರಿಯವರು ಉಳಿದ ಬೇಡಿಕೆಗಳನ್ನು ತಾ 20-1-80ರ ನಂತರ ಮಾತುಕತೆಗಳ ಮೂಲಕ ಬಗೆಹರಿಸಲು ಒಪ್ಪಿದ್ದಾರೆ.

ನಂತರ ನಡೆದ ಬಹಿರಂಗಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಾಂ. ಪುರುಷೋತ್ತಮ, ಸಂಘಟನೆಯ ಮಹತ್ವ ಮತ್ತು ಶೋಷಣೆಯ ವಿರುದ್ಧ ಹೋರಾಡುವ ಅಗತ್ಯವನ್ನು ತಿಳಿಸಿದರು. ಕಾಂ. ಚಂದ್ರಶೇಖರ ಬಾಳೆಯವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ನಮ್ಮ ದೇಶದಲ್ಲಿ ದುಡಿಯುವ ವರ್ಗವನ್ನು ಸಂಘಟಿಸಿ ವರ್ಗರಹಿತ ಸಮಾಜವನ್ನು ಕಟ್ಟಲು ತಳೆದಿರುವ ನಿಲುವು ಹಾಗೂ ಎಡಪಕ್ಷಗಳು ಕೇರಳ, ಪ. ಬಂಗಾಳ, ತ್ರಿಪುರಾ ರಾಜ್ಯಗಳಲ್ಲಿ ಸಾಧಿಸಿರುವುದನ್ನು ವಿವರಿಸಿ, ಜಿಲ್ಲೆಯಲ್ಲಿಯೂ ಬಡವರ ಸಂಘಟನೆಯನ್ನು ಬಲಗೊಳಿಸಬೇಕೆಂದು ಕರೆಯಿತ್ತರು. ಕಾಂ. ಇಸ್ಮಾಯಿಲ್ ಚೌಧರಿಯವರು ವಂದನಾರ್ಪಣೆ ಮಾಡಿದ ನಂತರ ಸಭೆ ಮುಗಿಯಿತು.

○

ಪಕ್ಷಾಂತರ ಪ್ರಭುತ್ವ

[ಒಂದನೇ ಪುಟದಿಂದ]

ರಿಗಳಿಂದ ಕೂಡಿದ ಶ್ರೀ ಗುಂಡೂರಾಯರ ಸರಕಾರ ಎಷ್ಟು ದಿನ ಉಳಿಯುತ್ತದೆಯೋ ನೋಡಬೇಕು.

ಶ್ರೀಮತಿ ಇಂದಿರಾಗಾಂಧಿಯವರು ಅಧಿಕಾರ ವಹಿಸಿಕೊಂಡ ಹೊಸದರಲ್ಲಿ, ಕಾಂಗ್ರೆಯೇತರ ರಾಜ್ಯಗಳನ್ನು ಉರುಳಿಸುವುದರಲ್ಲಿ ತಮಗೆ ಆಸಕ್ತಿಯಿಲ್ಲವೆಂದೂ, ತಾವು ಕೇವಲ ತಮ್ಮ ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರುವುದಾಗಿ ಪ್ರಕಟಿಸಿದರು. ಅದರೊಂದಿಗೆ ತಮ್ಮ ಕಾರ್ಯಕ್ರಮವನ್ನು ಒಪ್ಪುವವರನ್ನೆಲ್ಲಾ ಪಕ್ಷಕ್ಕೇ ಸೇರಿಸಿಕೊಳ್ಳುವುದಾಗಿ ಹೇಳಿದರು. ಯಾವ ಶ್ರಮವೂ ಇಲ್ಲದೆ ಕರ್ನಾಟಕದಲ್ಲಿ ತಮ್ಮ ಪಕ್ಷ ಅಧಿಕಾರಕ್ಕೆ ಬಂದದ್ದನ್ನು ಕಂಡು ಉತ್ಸಾಹಿತರಾದ ಶ್ರೀಮತಿ ಇಂದಿರಾಗಾಂಧಿಯವರು ತಮ್ಮ ಆಪ್ತ ಕಾರ್ಯದರ್ಶಿ ಶ್ರೀ ಯಶಪಾಲ್‌ಕಪೂರ್ ರವರನ್ನು ಪಕ್ಷಾಂತರ ಪೂರ್ವ ಸಿದ್ಧತೆಗಳಿಗಾಗಿ ಎಲ್ಲಾ ರಾಜ್ಯಗಳಿಗೂ ಕಳಿಸುತ್ತಿದ್ದಾರೆ. ಇಂಥಾ ಪ್ರಯತ್ನದ ಫಲವಾಗಿ ಹರಿಯಾನ ರಾಜ್ಯದ ಮುಖ್ಯಮಂತ್ರಿ ಶ್ರೀ ಭಜನ್‌ಲಾಲ್ ತಮ್ಮ ಸಂಗಡಿಗರೊಂದಿಗೆ ಕಾಂಗ್ರೆಸ್ (ಐ)ಗೆ ಪಕ್ಷಾಂತರ ಮಾಡಿ ಶ್ರೀಮತಿ ಗಾಂಧಿಯವರಿಗೆ ಶರಣಾಗತರಾಗಿದ್ದಾರೆ. ಯಾವ ಕಷ್ಟವೂ ಇಲ್ಲದೆ ಉಳಿದ ರಾಜ್ಯ ಸರಕಾರಗಳೂ ಇದೇ ರೀತಿ ತಮ್ಮ ಮಡಿಲಿಗೆ ಬೀಳಬೇಕೆಂಬುದು ಶ್ರೀಮತಿ ಗಾಂಧಿಯವರ ಆಸೆ.

ಇತ್ತೀಚೆಗೆ ಲೋಕಸಭೆಗೆ ಆಯ್ಕೆಯಾದ ಕೆಲವು ವಿರೋಧ ಪಕ್ಷಗಳ ಸಂಸತ್ ಸದಸ್ಯರು ಪಕ್ಷಾಂತರ ಮಾಡಿ ಕಾಂಗ್ರೆ ಸೇರಿರುವುದು ವಿರೋಧ ಪಕ್ಷಗಳನ್ನು ಮತ್ತಷ್ಟು ದುರ್ಬಲಗೊಳಿಸಲಿದೆ.

ಇತ್ತೀಚೆಗೆ ಲೋಕಸಭೆಗೆ ಆಯ್ಕೆಯಾದ ಕೆಲವು ವಿರೋಧ ಪಕ್ಷಗಳ ಸಂಸತ್ ಸದಸ್ಯರು ಪಕ್ಷಾಂತರ ಮಾಡಿ ಕಾಂಗ್ರೆ ಸೇರಿರುವುದು ವಿರೋಧ ಪಕ್ಷಗಳನ್ನು ಮತ್ತಷ್ಟು ದುರ್ಬಲಗೊಳಿಸಲಿದೆ.

ಒಂದು ಗಮನಾರ್ಹ ಸಂಗತಿಯೆಂದರೆ ಇದುವರೆಗೂ ಯಾವ ಎಡಪಕ್ಷದ ಸಂಸತ್ ಸದಸ್ಯನಾಗಲಿ, ವಿಧಾನಸಭಾ ಸದಸ್ಯನಾಗಲೀ ಪಕ್ಷಾಂತರ ಮಾಡಿಲ್ಲ. ಪಕ್ಷಾಂತರದ ಪಿಡುಗು ಎಡಪಕ್ಷಗಳಿಗೆ ಸೋಂಕದಿರುವುದಕ್ಕೆ ಕಾರಣ ಎಡಪಕ್ಷಗಳ ಸಿದ್ಧಾಂತಿಕ ನಿಷ್ಠೆ. ಪಕ್ಷಾಂತರವನ್ನು ತಡೆಗಟ್ಟಲು ಈ ಮೊದಲೇ ಎಡಪಕ್ಷಗಳು ತಮ್ಮ ಸಲಹೆಯನ್ನು ಮುಂದಿಟ್ಟಿದ್ದರು. ಏನೆಂದರೆ, ಜನತೆಯಿಂದ ಆಯ್ಕೆಯಾದ ಯಾವ ಸದಸ್ಯನಾದರೂ ತಾನು ಪ್ರತಿನಿಧಿಸುವ ಕ್ಷೇತ್ರದ ಜನತೆಯ ಅಭಿಪ್ರಾಯಗಳಿಗೆ ವಿರುದ್ಧವಾಗಿ ವರ್ತಿಸಿದರೆ ಅಥವಾ ಯಾವುದೇ ಸಮಯದಲ್ಲಿ ತಾವು ಆರಿಸಿ ಕಳುಹಿಸಿದ ಪ್ರತಿನಿಧಿ ಅಯೋಗ್ಯನೆಂದು ಅನಿಸಿದರೆ, ಅಂತಹವರನ್ನು ವಾಪಸು ಕರೆಸಿಕೊಳ್ಳುವ ಅಧಿಕಾರ ಜನತೆಗೆ ಇರಬೇಕೆಂಬುದು. ಎಲ್ಲಿಯವರೆಗೆ ಜನಗಳಿಗೆ ತಾವು ಆರಿಸಿದ ಪ್ರತಿನಿಧಿಯನ್ನು ಸಂಸತ್ತು, ವಿಧಾನ ಸಭೆಗಳಿಂದ ವಾಪಸು ಕರೆಸುವ ಅಧಿಕಾರ ಸಿಗುವುದಿಲ್ಲವೋ ಅಲ್ಲಿಯವರೆಗೂ ಈ ಪಕ್ಷಾಂತರ ಪ್ರಭೃತಿಗಳ ಚೆಲ್ಲಾಟಗಳನ್ನು ತಪ್ಪಿಸಲು ಸಾಧ್ಯವಿಲ್ಲ. ಏನೋನೋ ಭರವಸೆಗಳನ್ನಿತ್ತು, ಹಲವು ಉಪಾಯಗಳಿಂದ ಆಯ್ಕೆಯಾದ ಪ್ರತಿನಿಧಿಗಳು ತಮ್ಮನ್ನು ವಿಚಾರಿಸುವ ಜನ ಇದ್ದಾರೆಂದು ಅರಿಯುವ ತನಕ ಈ ಪಕ್ಷಾಂತರಕ್ಕೆ ಕೊನೆಯೂ ಇಲ್ಲ.

–ಮು. ಇಕ್‌ಬಾಲ್ ಹುಸೇನ್

●

ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಗೆಲುವು

[ಒಂದನೇ ಪುಟದಿಂದ]

ಮಂಡಿಸಿದರು. ವಿರೋಧ ಪಕ್ಷಗಳು ಒಗ್ಗಟ್ಟಿನಿಂದ ತಂದ ತಿದ್ದುಪಡಿಯನ್ನು ಮತದಾನಕ್ಕೆ ಹಾಕಬೇಕೆಂದು ಒತ್ತಾಯ ಬಂದಾಗ, ಈಚೆಗೆ ಲೋಕದಳಕ್ಕೆ ರಾಜೀನಾಮೆ ನೀಡಿ ಪಕ್ಷೇತರ ಸದಸ್ಯರಾಗಿರುವ ಬಿ. ಪಿ. ಮೌರ್ಯ ಅವರು ವಂದನಾ ನಿರ್ಣಯಕ್ಕೆ ತಿದ್ದುಪಡಿ ಅಂಗೀಕರಿಸುವ ಸಂಪ್ರದಾಯವಿಲ್ಲವೆಂದರು. ಆದರೆ ಆಕ್ಷೇಪಣೆ ತಡವಾಗಿ ಬಂದಿದೆಯೆಂದು ಸಭಾಪತಿ ಹಿದಾಯತುಲ್ಲಾ ತಿದ್ದುಪಡಿಯನ್ನು ಮತದಾನಕ್ಕೆ ಹಾಕಿದಾಗ ವಿರೋಧ ಪಕ್ಷಗಳಿಗೆ ಜಯ ಸಿಕ್ಕಿತು.

ಈ ಮೊದಲು ಸೂಚನೆಗೆ 136 ತಿದ್ದುಪಡಿಗಳನ್ನು ತರಲಾಗಿತ್ತು. 104ನೇ ತಿದ್ದುಪಡಿ ಹೊರತು ಉಳಿದವುಗಳ ಮೇಲೆ ಮತದಾನಕ್ಕೆ ಒತ್ತಾಯ ಮಾಡುವುದಿಲ್ಲವೆಂದು ಕಾಂ. ಭೂಪೇಶ್‌ಗುಪ್ತಾ ನೀಡಿದ ಹೇಳಿಕೆಯನ್ನು ಇತರ ವಿರೋಧ ಪಕ್ಷಗಳ ನಾಯಕರೂ ಒಪ್ಪಿಕೊಂಡರು.

ವಿರೋಧ ಪಕ್ಷಗಳ ಸದಸ್ಯರ ಪೂರ್ಣ ಹಾಜರಾತಿ ಸಿಕ್ಕಿದರೆ ಮತಗಳ ಅಂತರವನ್ನು ಇನ್ನೂ ಹೆಚ್ಚಿಸಬಹುದಿತ್ತು. ಸದ್ಯಕ್ಕೆ ರಾಜ್ಯಸಭೆಯಲ್ಲಿ ಕಾಂಗ್ರೆ ಅಲ್ಪಸಂಖ್ಯಾತ ಪಕ್ಷವಾಗಿರುವುದರಿಂದ ಶ್ರೀಮತಿ ಗಾಂಧಿಯವರ ಆಟ ನಡೆಯದಂತಾಗಿದೆ. ಏಪ್ರಿಲ್ ತಿಂಗಳಲ್ಲಿ ರಾಜ್ಯಸಭೆಗೆ ದ್ವೈವಾರ್ಷಿಕ ಚುನಾವಣೆಗಳು ನಡೆಯಲಿವೆ, ಆ ವೇಳೆಗೆ ಬಹುಪಾಲು ರಾಜ್ಯಗಳು ತಮ್ಮ ಕೈಸೇರಿದರೆ ಮಾತ್ರ ಸಂಸತ್ತಿನ ಎರಡು ಮನೆಗಳಲ್ಲಿಯೂ ತಮಗೆ ಬೇಕಾದಂತೆ ಕಾನೂನುಗಳನ್ನು ಅಂಗೀಕರಿಸುವಂತೆ ಮಾಡಲು ಸಾಧ್ಯ ಎಂಬುದು ಶ್ರೀಮತಿ ಗಾಂಧಿಯವರಿಗೆ ತಿಳಿದಿದೆ. ರಾಜ್ಯಸಭೆಯಲ್ಲಿ ಹಾಲಿ ಇರುವ ಸದಸ್ಯರನ್ನೇ ಪಕ್ಷಾಂತರ ಮಾಡಿಸಲು ಸಾಧ್ಯವಾಗದೇ ಹೋದರೆ, ಬರಲಿರುವ ದಿನಗಳಲ್ಲಿ ಬಹುತೇಕ ರಾಜ್ಯ ಸರಕಾರಗಳನ್ನು ಶ್ರೀಮತಿ ಗಾಂಧಿಯವರು ಒಂದಲ್ಲ ಒಂದು ರೀತಿಯಿಂದ ಉರುಳಿಸುವುದು ಖಂಡಿತ. ○

ಸಂಪಾದಕೀಯ

[1ನೇ ಪುಟದಿಂದ]

ಅವರ ಸವಾಲಿಗೆ ಈಗಾಗಲೇ ಬಂಗಾಳದ ಜನತೆ ಉತ್ತರ ಕೊಟ್ಟಿದೆ. ಈಗ ಕೇರಳದ ಜನತೆಯೂ ಸರಿಯಾದ ಉತ್ತರ ಕೊಟ್ಟಿರುತ್ತಾರೆ. ಇತರ ರಾಜ್ಯಗಳ ಜನತೆಯೂ ಎಚ್ಚರಗೊಂಡು ಕೇಂದ್ರದ ಈ ಸರ್ವಾಧಿಕಾರಿ ಪ್ರವೃತ್ತಿಗೆ ಕಡಿವಾಣ ಹಾಕಿ ಅದನ್ನೆದುರಿಸಬೇಕೆಂದೂ, ಪ್ರಜಾಪ್ರಭುತ್ವದ ರಕ್ಷಣೆಗೆ ಎಲ್ಲ ಶಕ್ತಿಗಳೂ ಒಂದಾಗಿ ಹೋರಾಡಬೇಕೆಂದೂ, ರಾಜ್ಯ ಸರಕಾರಗಳ ಸ್ವಾಯತ್ತತೆಯು ಪವಿತ್ರವಾಗಿದ್ದು ಕೇಂದ್ರಾಡಳಿತ ಬಲಿಷ್ಠವಾಗಿರಬೇಕಾದರೆ ರಾಜ್ಯಗಳ ಸ್ವಾಯತ್ತತೆಯೂ ಅಷ್ಟೇ ಅವಶ್ಯಕವೆಂಬುದನ್ನು ತಿಳಿದು ಎಲ್ಲ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೂ ಒಂದುಗೂಡಿ ಹೋರಾಡಬೇಕೆಂದು ವಿನಂತಿಸುತ್ತೇವೆ.

○

ಯಶವಂತಪುರ ವಿಭಾಗ ಕಾರ್ಮಿಕ ಸಂಘಗಳ ಸಭೆ

[3ನೇ ಪುಟದಿಂದ]

ದರೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಮಾತ್ರ" ಎಂದು ತಿಳಿಸಿದರು. ನಂತರ ರೈತಸಂಘದ ಕಾರ್ಯದರ್ಶಿ ಕಾಂ. ಜಗನ್ನಾಥ ಮಾತನಾಡುತ್ತಾ ಸುಮಾರು 6 ತಿಂಗಳಿಂದ ಸತತ ಹೋರಾಟ ಮಾಡುತ್ತಿರುವ ತಾತಗುಣಿ ಎಸ್ಟೇಟ್ ಕಾರ್ಮಿಕರ ಹೋರಾಟದ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು. ಎಸ್ಟೇಟ್ ಮಾಲೀಕರಾದ ಅಂತರಾಷ್ಟ್ರೀಯ ಖ್ಯಾತಿಯ ದೇವಿಕಾರಾಣಿ ರೋರಿಚ್ ದಂಪತಿಗಳು ಕಾರ್ಮಿಕರನ್ನು ತೀವ್ರ ಶೋಷಣೆ ಮಾಡುತ್ತಿರುವುದನ್ನು ತಿಳಿಸಿ ಹೋರಾಟಕ್ಕೆ ಕಾರ್ಮಿಕರ ಬೆಂಬಲ ಕೋರಿದರು.

ನಂತರ ಕಿರ್ಲೋಸ್ಕರ್ ಯೂನಿಯನ್‌ನ ಸಹಕಾರ್ಯದರ್ಶಿ ಕಾಂ. ಸುಬ್ರಮಣಿ ಮಾತನಾಡಿದರು.

ಕೊನೆಯದಾಗಿ ವಿ. ಪಿ. ಕುಲಕರ್ಣಿ ಮಾತನಾಡುತ್ತಾ ಕೇವಲ ಆರ್ಥಿಕ ಬೇಡಿಕೆಗಳಿಗೋಸ್ಕರ ಹೋರಾಟ ಮಾಡುತ್ತಾ ಹೋದರೆ ಸಮಸ್ಯೆಗಳು ಖಂಡಿತವಾಗಿ ಪರಿಹಾರವಾಗುವುದಿಲ್ಲ. ಉತ್ಪಾದನಾ ಸಾಮಗ್ರಿಗಳು ಕೆಲವೇ ಜನರ ಅಧೀನದಲ್ಲಿರುವುದರಿಂದ ಸಮಾಜದ ಅನಿಷ್ಟಗಳಾದ ಬೆಲೆಏರಿಕೆ, ನಿರುದ್ಯೋಗ, ಬಡತನ ಇರುವುದು. ಧರ್ಮ, ಜಾತಿ ಮತ್ತು ದೇವರುಗಳ ಹೆಸರಿನಿಂದ ದುಡಿಯುವ ಐಕ್ಯತೆಯನ್ನು ಮುರಿಯುತ್ತಿರುವ ಬಂಡವಾಳಶಾಹಿಗಳ ಕುತಂತ್ರವನ್ನು ಸಾಧಾರವಾಗಿ ನಿರೂಪಿಸಿದರು. ಕಾರಣ ಕಾರ್ಮಿಕರು ಹೋರಾಟದ ದೃಷ್ಟಿಕೋನ ಬದಲಿಸಿದಾಗ ಮಾತ್ರ ಹಸಿವು, ಬಡತನವಿಲ್ಲದ ಸಮಾಜ ನಿರ್ಮಾಣ ಸಾಧ್ಯ" ಎಂದು ತಿಳಿಸಿದರು. ಕೊನೆಗೆ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು. ○

ಪಕ್ಷವನ್ನು ಬಲಪಡಿಸಿ ಐಕ್ಯ ಹೋರಾಟಕ್ಕೆ ಮುಂದಾಗೋಣ

ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ನಾವು ಚುನಾವಣೆಯಲ್ಲಿ ಗೆಲ್ಲುವ ಸಾಧ್ಯತೆಯೇ ಇದ್ದಿಲ್ಲ. ಆದರೆ ನಾವು ನಿರೀಕ್ಷಿಸಿರುವುದಕ್ಕಿಂತ ಕಡಿಮೆ ಮತ ನಮಗೆ ಬಿದ್ದಿದೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಕೇವಲ ತಾತ್ವಿಕವಾಗಿಯೂ ಮತ್ತು ಗೆಳೆತನದ ಹೋರಾಟದ ದೃಷ್ಟಿಯಿಂದಲೂ ಚುನಾವಣೆಗೆ ನಿಂತಿರುವುದೇ ಹೊರತು ಗೆಲ್ಲುವುದಕ್ಕಲ್ಲ ಎಂಬುದಾಗಿ ಪತ್ರಿಕೆಗಳಲ್ಲೂ ನಮ್ಮ ವಿರೋಧಿಗಳಿಂದಲೂ ನಡೆದ ಪ್ರಚಾರದಿಂದಲಾಗಿ ನಮಗೆ ಸಿಗಬಹುದಾಗಿದ್ದ ಕೆಲವು ಮತಗಳು ಸಿಗದಿರುವುದು, ಜನತೆಯ ಮಧ್ಯೆ ಸಂಪರ್ಕ ಮತ್ತು ಜನರ ಸಮಸ್ಯೆಗಳಿಗಾಗಿ ಸತತವಾಗಿ ಹೋರಾಡಿ ಜನತೆಗೆ ಮುಂದಾಳುತ್ವವನ್ನೀಯುವುದರಲ್ಲಿ ಹಿಂದೆ ಬಿದ್ದಿರುವುದು, ಯಾರಿಗೆಬೇಕಾಗಿ ಹೋರಾಡುತ್ತೇವೋ ಆ ಶ್ರಮಜೀವಿ ವರ್ಗದಲ್ಲಿ ರಾಜಕೀಯ ಪ್ರಜ್ಞೆ ಬೆಳೆಸಲು ಸಾಕಷ್ಟು ಗಮನ ಕೊಡಲಾಗದಿದ್ದುದು, ಮಂಗಳೂರು ಕ್ಷೇತ್ರದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವ ತೀರ್ಮಾನವನ್ನು ಕೊನೆಗಳಿಗೆಯಲ್ಲಿ ಮಾಡಿದ್ದು-ಇವೇ ಮೊದಲಾದ ಕಾರಣಗಳಿಂದಲಾಗಿ ನಮಗೆ ಸಿಗಬಹುದಾಗಿದ್ದ ಮತಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರಬಹುದು. ಈ ಕ್ಷೇತ್ರದ ಫಲಿತಾಂಶವನ್ನು ರಾಷ್ಟ್ರದಲ್ಲಿನ ಫಲಿತಾಂಶದ ಹಿನ್ನೆಲೆಯಿಂದ ನೋಡಬೇಕೇಹೊರತು, ಪ್ರತ್ಯೇಕವಾಗಿಯಲ್ಲ. ಕೇರಳ, ಬಂಗಾಲ, ತ್ರಿಪುರಾ ರಾಜ್ಯಗಳಲ್ಲಿ (ಎಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು ಬದಲಿಯಾಗಿ ಬೆಳೆದಿವೆಯೋ ಅಲ್ಲಿ) ಬಿಟ್ಟರೆ, ಬೇರೆಡೆಯ ಫಲಿತಾಂಶ ಬೇರೆಯೇ ಇದೆ. ಸ್ಥಳೀಯ ವ್ಯಕ್ತಿ ಎಂಬ ವಿಚಾರ, ಜಾತಿ, ಮತ, ಭಾಷೆ ಮೊದಲಾದುವುಗಳಿಗೆ ಮತದಾರರು ಲೋಕಸಭಾ ಚುನಾವಣೆಯಲ್ಲಿ ಪ್ರಾಧಾನ್ಯತೆ ಕೊಟ್ಟಂತೆ ಕಾಣುವುದಿಲ್ಲ. ಚುನಾವಣೆ ಆದ ಮೇಲೆ ಇಂದಿರಾ ಕಾಂಗ್ರೆಸ್ ಅಧಿಕ ಬಹುಮತದಿಂದ ಅಧಿಕಾರಕ್ಕೆ ಬಂದುದು ಅಪಾಯವಾದರೂ,—ಒಟ್ಟಾರೆ ಪರಿಸ್ಥಿತಿ ಎಡ ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟಿಗೂ, ಹೋರಾಟಕ್ಕೂ ಅನುಕೂಲವಿದೆ. ಕೇರಳದಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಎಡ ಪ್ರಜಾಪ್ರಭುತ್ವರಂಗವು ಪ್ರಚಂಡ ಜಯಗಳಿಸಿರುವ ಈ ಸಂದರ್ಭದಲ್ಲಿ ಪಾರ್ಲಿಮೆಂಟಿನ ಒಳಗೂ ಹೊರಗೂ, ಕೇರಳ, ಬಂಗಾಲ ಮತ್ತು ತ್ರಿಪುರಾ ರಾಜ್ಯಗಳಲ್ಲೂ ಎಡ ಪಕ್ಷಗಳ ಐಕ್ಯತೆ ಮತ್ತು ಎಡ ಪ್ರಜಾಪ್ರಭುತ್ವ ಐಕ್ಯತೆಯ ಮುಂಚೂಣಿಯಲ್ಲಿದೆ ನಮ್ಮ ಪಕ್ಷ. ಇಂದಿರಾ ಕಾಂಗ್ರೆಸ್ಸಿಗೆ ಬದಲಿ ಕೊಡುವುದು ನಮ್ಮ ನೇತೃತ್ವದ ಕೂಟದಿಂದ ಮಾತ್ರ ಸಾಧ್ಯವೆಂಬುದೂ ಚುನಾವಣೆ ತೋರಿಸಿ ಕೊಟ್ಟಿದೆ.

ಇದರಿಂದ ಸ್ಫೂರ್ತಿ ಪಡೆದು, ನಮ್ಮ ಪಕ್ಷದ ಸಂಘಟನೆಯನ್ನೂ, ಸಾಮೂಹಿಕ ಸಂಘಟನೆಗಳನ್ನೂ ಬಲಪಡಿಸಿ, ರಾಜ್ಯದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಸೇರಿ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಸಂಯುಕ್ತ ಚಳುವಳಿಗಳನ್ನು ಹಾಕಬೇಕಾಗಿದೆ. ತೀವ್ರವಾಗಿ ಬಿಕ್ಕಟ್ಟಿಗೊಳಗಾಗಿರುವ ನಮ್ಮ ಅರ್ಥ ವ್ಯವಸ್ಥೆಯು ಇಂದಿರಾ ಕಾಂಗ್ರೆಸ್‌ನ ಧೋರಣೆಗಳಿಂದ ಇನ್ನೂ ಜರ್ಜರಿತವಾಗಲಿದೆ. ಶ್ರಮಜೀವಿಗಳಿಗೆ ಹೋರಾಟ ಬಿಟ್ಟರೆ ಬೇರೆ ಮಾರ್ಗ ವಿಲ್ಲ, ಎಂದು ಮಂಗಳೂರು ಬೋಳಾರದಲ್ಲಿ 23-1-80 ರಂದು ಸೇರಿದ ಪಕ್ಷದ ಸರ್ವ ಸದಸ್ಯರ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕಾಂ. ಎಂ. ಕೆ. ಭಟ್ ಹೇಳಿದರು. ಚುನಾವಣೆಯಲ್ಲಿ ಶ್ರಮಿಸಿದ ಎಲ್ಲಾ ಕಾರ್ಯಕರ್ತರಿಗೂ ಅಭಿನಂದಿಸಿದರು. ಕಾಂ. ಪಿ. ರಾಮಚಂದ್ರರಾವ್ ಅವರೂ ಮಾತನಾಡಿದರು. ○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT